ಕರ್ನಾಟಕ ವಿಧಾನ ಸಭೆ

ಸೋಮವಾರ 27ನೇ ಏಪ್ರಿಲ್ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ.

ವಿಷಯ: ಜನತಾದಳ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್‌ನಲ್ಲಿ ಸಭಾಧ್ಯಕ್ಷರೂ ಕೂಡ ಪಾಲ್ಗೊಂಡಿದ್ದರು ಎನ್ನತಕ್ಕಂಥ ವರದಿ ಪತ್ರಿಕೆಯಲ್ಲಿ ಬಂದಿರುವ ವಿಚಾರ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಪ್ರಶ್ನೋತ್ತರವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ನಾವು ಒಂದು ಮುಖ್ಯವಾದ ವಿಚಾರವನ್ನು ಪ್ರಸ್ತಾಪಿಸುವುದೇನೆಂದರೆ, ಇವತ್ತಿನ ಪತ್ರಿಕೆಗಳಲ್ಲಿ ನಾವು ಓದಿದ್ದೇನೆಂದರೆ ಮತ್ತು ಚಿತ್ರಗಳನ್ನೂ ಕೂಡ ನೋಡಿದ್ದೇನೆಂದರೆ, ಜನತಾದಳದ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್‌ನಲ್ಲಿ ನಮ್ಮ ಸಭಾಧ್ಯಕ್ಷರೂ ಕೂಡ ಪಾಲ್ಗೊಂಡಿದ್ದರು ಎನ್ನತಕ್ಕಂಥ ವರದಿ ಬಂದಿದೆ. ಜೊತೆಗೆ ಫೋಟೋ ಕೂಡ ಬಂದಿದೆ. ಅಷ್ಟೇ ಅಲ್ಲದೆ, ನಮ್ಮ ಪಾರ್ಲಿಮೆಂಟರಿ ಪ್ರೊಸೀಜರ್ ಪ್ರಕಾರ ಇಲ್ಲಿಯವರೆಗೆ ಯಾವ ಸ್ಪೀಕರ್ ಸಹ ಇಂಥ ಒಂದು ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್‌ಗಾಗಲೀ ಅಥವಾ ಎಲೆಕ್ಷನ್ ಕಮಿಟಿ ಮೀಟಿಂಗಿಗಾಗಲೀ ಅಟೆಂಡ್ ಮಾಡಿಲ್ಲ ಎನ್ನತಕ್ಕಂಥಾದ್ದೂ ವರದಿಯಲ್ಲಿ ಬಂದಿದೆ. ಹಿಂದೆ ಕೆ.ಹೆಚ್.ರಂಗನಾಥ್‌ರವರು ಒಂದು ಸಲ ದೆಹಲಿಗೆ ಹೋದಾಗ.....

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್,

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಮಾತನಾಡುವುದನ್ನು ತಡೆಯಬೇಕೆಂದು ಇದನ್ನು ಎತ್ತುತ್ತಿದ್ದೀರಿ. ನಿಜವಾಗಲೂ ತಮ್ಮಲ್ಲಿ ಪಾಯಿಂಟ್ ಆಫ್ ಆರ್ಡರ್ ಇದ್ದರೆ ನಾನು ಕುಳಿತುಕೊಳ್ಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಇಡೀ ರಾಜ್ಯದಲ್ಲಿ ಸಭಾಧ್ಯಕ್ಷರ ಬಗ್ಗೆ ಚರ್ಚೆ ನಡೆಯುವಂಥ ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅಧ್ಯಕ್ಷರ ಪೀಠ ಅತಿ ಉನ್ನತವಾದ ಪೀಠ. ಆ ಪೀಠದ ಬಗ್ಗೆಯೇ ಅನುಮಾನ ವ್ಯಕ್ತ ಮಾಡಿದರೆ, ಒಂದು ರೀತಿಯಲ್ಲಿ ಹೆಂಡತಿಯ ಬಗ್ಗೆ ಅನುಮಾನ ಮಾಡಿಕೊಂಡಂಥ ಸ್ಥಿತಿ ಬರುತ್ತದೆ.

ಅಧ್ಯಕ್ಷರು: ಹೆಂಡತಿ ಅಲ್ಲ, ತಾಯಿಯ ಬಗ್ಗೆ ಎಂದು ಹೇಳಿ. ಏಕೆಂದರೆ ಹೆಂಡತಿ ಎಂದರೆ ಬಹಳ ಜನ ಅಟ್ಟಿಸಿಕೊಂಡು ಬರುತ್ತಾರೆ.

ಶ್ರೀ ಕೆ.ಎನ್.ನಾಗೇಗೌಡ: ಬೇಕಾದಷ್ಟು ಕನ್‌ವೆನ್‌ಷನ್‌ಗಳಾಗಿವೆ. ಯಾವುದೇ ವಿಚಾರವನ್ನು ಸ್ಪೀಕರ್ ಮೇಲೆ ಪ್ರಸ್ತಾಪ ಮಾಡಬೇಕಾದರೆ ಮೊದಲು ನೋಟೀಸ್ ಕೊಡಬೇಕು ಎಂದು ನಮ್ಮ ನಿಯಮಾವಳಿಯಲ್ಲಿ ಇದೆ, ಇದು ಮೊದಲನೆಯದು. ಎರಡನೆಯದಾಗಿ, ನಮ್ಮಲ್ಲಿ ನಡೆದು ಬಂದಿರತಕ್ಕಂಥ ಸಂಪ್ರದಾಯಗಳ ಪ್ರಕಾರ, ಸ್ಪೀಕರ್‌ರವರನ್ನು ಆ ಖುರ್ಚಿಯಲ್ಲಿ ಕೂರಿಸಿಕೊಂಡು ಅವರ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಸರಿಯಾದಂಥ ಸಂಪ್ರದಾಯವಲ್ಲ. ನಾನು 169 ಮತ್ತು 170ನೇ ರೂಲ್‌ಗಳನ್ನು ಕೋಟ್ ಮಾಡುವುದಕ್ಕೆ ಮುಂಚಿತವಾಗಿ ಹೇಳುವುದೇನೆಂದರೆ, ನಿಮ್ಮ ವಿಚಾರವನ್ನು ಈ ಸದನದಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತವಲ್ಲ. ಆ ಸ್ಥಾನದ ಗೌರವವನ್ನು ಉಳಿಸತಕ್ಕಂಥ ಜವಾಬ್ದಾರಿ ವಿರೋಧ ಪಕ್ಷದ ನಾಯಕರಿಗೂ ಇರಬೇಕು, ಬಿಜೆಪಿಯ ನಾಯಕರಿಗೂ ಇರಬೇಕು, ನಮಗೂ ಇರಬೇಕು. ತಾವು ಅದೇ ಜವಾಬ್ದಾರಿಯಿಂದ ಅತ್ಯಂತ ಗೌರವವಾಗಿ ನಡೆದುಕೊಂಡಿದ್ದೀರಿ, ಅತ್ಯಂತ ಹೆಸರುವಾಸಿಯಾಗಿ ನಡೆದುಕೊಂಡಿದ್ದೀರಿ. ತಾವು ಆ ಸ್ಥಾನದ ಗೌರವವನ್ನು ತೆಗೆದಿಲ್ಲ. ಆದ್ದರಿಂದ ಇಲ್ಲಿ ನಿಮ್ಮನ್ನು ಕೂರಿಸಿಕೊಂಡು ಚರ್ಚೆ ಮಾಡತಕ್ಕಂಥಾದ್ದು ಖಂಡಿತವಾಗಿ ಸರಿಯಲ್ಲ ಮತ್ತು ಅದು ಸಂಪ್ರದಾಯವೂ ಅಲ್ಲ.

MR. SPEAKER: I will give my ruling.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಈಗ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಸಭಾಧ್ಯಕ್ಷರು ಪತ್ರಿಕೆಗೇ ಕ್ಲಾರಿಫೈ ಮಾಡಬೇಕೇ? Should he not have a say in this matter? ನಮ್ಮ ನಮ್ಮ ಅನುಮಾನಗಳನ್ನು ನಾವೇ ಬೆಳೆಸಿಕೊಂಡು ಹೋಗಬೇಕೇ? ನಿಜಾಂಶ ಏನು ಎನ್ನುವುದು ಈ ಸಭೆಗೆ ಗೊತ್ತಾಗಬೇಕಲ್ಲವೇ?

ಅಧ್ಯಕ್ಷರು: ಮಾನ್ಯ ನಾಗೇಗೌಡರು ಕ್ರಿಯಾಲೋಪವನ್ನು ಎತ್ತಿದ್ದಾರೆ. ನಾನು ನಾಗೇಗೌಡರಿಗೆ ಇಷ್ಟನ್ನು ಹೇಳುತ್ತೇನೆ, ಈ ಸ್ಥಾನದ ಗೌರವವನ್ನು ಉಳಿಸಬೇಕು ಮತ್ತು ಸತ್ಯದ ಪರಿಚಯ ಕೂಡ ಜನರಿಗೆ ಆಗಬೇಕು. ಈ ಸ್ಥಾನದಲ್ಲಿ ನಾನು ಕುಳಿತುಕೊಳ್ಳುವುದಕ್ಕೆ ಇನ್ನೂ ಅರ್ಹತೆ ಉಳಿಸಿಕೊಂಡಿದ್ದೇನೆ ಎನ್ನುವುದನ್ನು ನಾನು ಜನರಿಗೆ ಈ ಸದನದ ಮುಖಾಂತರ ಸಾಬೀತು ಮಾಡಬೇಕಾಗಿದೆ. ಆದ್ದರಿಂದ ವಿಚಾರವನ್ನು ಪ್ರಸ್ತಾಪ ಮಾಡುವುದರಲ್ಲಿ ಏನೂ ತಪ್ಪಿಲ್ಲ. ನಾನು ಇಲ್ಲಿಂದ ಎದ್ದು ಇಲ್ಲಿ ಉಪಾಧ್ಯಕ್ಷರು ಕುಳಿತುಕೊಂಡರೆ ಅದು ಸರಿಯಾಗುವುದಿಲ್ಲ. ಏಕೆಂದರೆ ನಾನು ಇಲ್ಲಿ ಇದ್ದವನು, ನನ್ನ ಮೇಲೇ ಈ ಅಭಿಪ್ರಾಯ ವ್ಯಕ್ತಪಡಿಸಿರತಕ್ಕಂಥಾದ್ದು. ಆದ್ದರಿಂದ ನಾನು ಇಲ್ಲಿ ಕುಳಿತಿದ್ದರೆ ಸತ್ಯಾಸತ್ಯತೆ ಏನು ಎನ್ನುವುದನ್ನು ತಿಳಿಸುವುದಕ್ಕೆ ನನಗೆ ಅನುಕೂಲವಾಗುತ್ತದೆ. ನಾನು ಇಲ್ಲಿ ಕುಳಿತಿರುತ್ತೇನೆ. ಏನು ನಡೆದಿದೆ ಎಂದು ಹೇಳಲಿ. ಅದರಿಂದ ಏನೂ ತೊಂದರೆಯಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ನೋಟೀಸ್ ಕೂಡ ಕೊಟ್ಟಿದ್ದೇವೆ.

ಅಧ್ಯಕ್ಷರು: ಕೊಟ್ಟಿದ್ದೀರಿ. ಅದರಲ್ಲಿ ಏನೂ ತೊಂದರೆಯಿಲ್ಲ.

ಶ್ರೀ ಸಿ.ಬೈರೇಗೌಡ: ನಿಯಮಾವಳಿಗಳ ಪ್ರಕಾರ, ತಮ್ಮ ಬಗ್ಗೆ ಮಾತನಾಡುವಾಗ ಮೊದಲು ಸೂಚನೆ ಕೊಡಬೇಕು ಎಂದು ಇದೆ. ನನ್ನ ಮಾಹಿತಿಗೋಸ್ಕರ ಕೇಳುತ್ತಿದ್ದೇನೆ.

MR. SPEAKER: I have to remind you of one English saying: "Oh God, save me from my friends. I can take care of my enemies."

SRI C.BYREGOWDA: I am not coming here to save you. I am only just mentioning.....

MR. SPEAKER: I am overwhelmed by the affection shown to me by my friends who have very systematically spread this canard. I will come out with these details. Please have patience for a few minutes.

SRI C. BYREGOWDA: Kindly bear with me for a minute. ನಿಯಮಾವಳಿಗಳ ಪ್ರಕಾರ ನಡೆದುಕೊಂಡಿದ್ದಾರೆಯೇ, ಇಲ್ಲವೇ ಎನ್ನುವುದಷ್ಟೇ ನನಗೆ ಬೇಕಾಗಿರತಕ್ಕಂಥಾದ್ದು. ಅವರು ತಮಗೆ ಸೂಚನೆ ಕೊಡಬೇಕಾಗಿತ್ತು. ತಮಗೆ ಸೂಚನೆ ಬಂದಿದೆ, ಅವರು ಪ್ರಸ್ತಾಪ ಮಾಡಲಿ ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಅದು ತಮ್ಮ ತೀರ್ಪು. ತಮ್ಮ ತೀರ್ಪನ್ನು ನಾವೂ ಕೂಡ ಒಪ್ಪುತ್ತೇವೆ. ಆದರೆ ನಿಯಮಾವಳಿಯಲ್ಲಿ ಲೋಪವಾಗತಕ್ಕಂಥಾದ್ದು ಬೇಡ. ಆದ್ದರಿಂದ ನಿಯಮಾವಳಿಗಳ ಪ್ರಕಾರ, ನಿಮಗೆ ನೋಟೀಸ್ ಬಂದಿದೆಯೇ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಸತ್ಯ ಸಾಬೀತು ಮಾಡಬೇಕಾಗಿದ್ದರೆ ಅದಕ್ಕೆ ನಿಯಮಾವಳಿ ಅಡ್ಡ ಬರುವ ಹಾಗಿದ್ದರೆ, ನಿಯಮಾವಳಿಯನ್ನು ಸಡಿಲಗೊಳಿಸಿಯಾದರೂ ಕೂಡ ಸತ್ಯ ಸಾಬೀತು ಮಾಡತಕ್ಕಂಥ ಹೊಣೆಗಾರಿಕೆ ನನ್ನ ಮೇಲಿದೆ. ಸತ್ಯ ಸಾಬೀತಾಗಲು ನಿಯಮಾವಳಿಗಳನ್ನು ಸಡಿಲಗೊಳಿಸಬೇಕಾಗಿದ್ದರೂ ನಾನು ಅದಕ್ಕೆ ತಯಾರಾಗಿದ್ದೇನೆ. ನಾನು ಅಪಕೀರ್ತಿ ಹೊತ್ತುಕೊಂಡು ಹೋಗಲು ಇಲ್ಲಿ ಬಂದು ಕುಳಿತಿಲ್ಲ.

ಡಾ: ಎಂ.ಪಿ.ಕರ್ಕಿ: ನಿಯಮ 169ರಲ್ಲಿ ಬರತಕ್ಕಂಥಾದ್ದೇನೆಂದರೆ.....

MR. SPEAKER: Why do you worry about technicali-

ties? It is a matter involving the moralistic attitude of a person. Whether I have the moral right to sit in this office or not, that is the question. I am not worried about the rules. Even if the rules permit me, if morally I feel I am wrong, I don't think I will continue here. I will tell this whole world I stand by what I have been proclaiming all these days. I am capable of taking care of these detractors. I stand on my strength and on nobody else's strength.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಉದ್ಭವವಾಗಿದ್ದುದು ಏನೆಂದರೆ, ಇಲ್ಲಿಯವರಿಗೆ ಹೆಚ್ಚುಕಡಿಮೆ ಸುಮಾರು ಮೂರು ವರ್ಷಗಳಾದವು, ಈ ಸದನದಲ್ಲಿ ನಾವು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ ಮತ್ತು ಅನೇಕ ಸಲ ಆ ವಿಷಯಗಳ ಮೇಲೆ ಚರ್ಚೆಯನ್ನು ಮಾಡಿ ಅದಕ್ಕೆ ಅನೇಕ ಸಲ ತಮ್ಮಿಂದ ಪರಿಹಾರವನ್ನೂ ಕೂಡ ಕಂಡಿದ್ದೇವೆ. ಆದ್ದರಿಂದ ಇವತ್ತು ತಮ್ಮ ಮೇಲೆ ಗೂಬೆ ಕೂರಿಸಬೇಕು ಅಥವಾ ತಾವು ಅಲ್ಲಿಗೆ ಹೋಗಿದ್ದು ಸರಿಯಲ್ಲ ಎನ್ನುವಂಥ ಮಾತನ್ನು ಹೇಳಲಿಕ್ಕೆ ಇಲ್ಲಿ ನಾನು ಎದ್ದುನಿಂತಿಲ್ಲ. ನಾನು ಎದ್ದುನಿಂತಿರುವ ಉದ್ದೇಶ ಏನೆಂದರೆ - 'ವಿಧಾನಸಭೆಯಲ್ಲಿ ಸ್ಪೀಕರ್ ಆದವರು ಯಾವುದೇ ಪಕ್ಷದ ಸಭೆಗೆ ಹೋಗತಕ್ಕಂಥದ್ದು ಅಥವಾ ಎಲೆಕ್ಷನ್ ಕಮಿಟಿಯಲ್ಲಿ ಭಾಗವಹಿಸಿ ಸದಸ್ಯರನ್ನು ಆಯ್ಕೆ ಮಾಡುವಂಥ ವಿಚಾರದಲ್ಲಿ ಭಾಗಿಯಾಗತಕ್ಕಂಥದ್ದು ಆಗಿರಲಿಲ್ಲ. ಇದು ಇಲ್ಲಿಯವರೆಗೆ ನಡೆದುಕೊಂಡು ಬಂದಂಥ ಸತ್‌ಸಂಪ್ರದಾಯವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಪತ್ರಿಕೆಗಳಲ್ಲಿ ಉದಾಹರಣೆ ಕೂಡ ಬಂದಿದೆ. ನಾನು ಅದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಒಂದು ಸಲ ಶ್ರೀ ರಂಗನಾಥ್ ಅವರು ಈ ಸದನದ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ದೆಹಲಿಗೆ ಹೋಗಿದ್ದರು. ಆವಾಗ ಈ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಆ ಲೋಪವನ್ನು ಎತ್ತಿಹಿಡಿದು 'ಅವರು ದೆಹಲಿಗೆ ಹೋಗಿದ್ದುದು ಸರಿಯಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದರು' ಎನ್ನುವುದು ಪತ್ರಿಕೆಯಲ್ಲಿ ಬರೆದಿದ್ದಾರೆ. ಆಮೇಲೆ ಪಾರ್ಲಿಂಮೆಂಟಿನ ಪ್ರಥಮ ಅಧ್ಯಕ್ಷರಾದ ಶ್ರೀ ಮಾವಲಕರ್ ಅವರು - ''ಯಾವುದೇ ಸ್ಪೀಕರ್ ಆಗಲಿ, ಅಧ್ಯಕ್ಷರಾಗಲಿ ಯಾವುದೇ ಒಂದು ಪಕ್ಷದ ಸಭೆಗಳಲ್ಲಿ ಭಾಗವಹಿಸುವುದು ಉಚಿತ ಅಲ್ಲ, ಒಂದು ಸಾರಿ ಅಧ್ಯಕ್ಷರಾದರೆ ಅವರು ಪಕ್ಷಾತೀತ'' ಎನ್ನುವಂಥ ರೂಲಿಂಗನ್ನು ಕೊಟ್ಟಿದ್ದಾರೆ ಎನ್ನುವಂಥದ್ದು ಕೂಡ ಪತ್ರಿಕೆಗಳಲ್ಲಿ ಬಂದಿದೆ. ಹೀಗೆ ಪರಿಸ್ಥಿತಿ ಇದ್ದಾಗ 'ಒಂದು ಬಾಗಿಲಿನಲ್ಲಿ ನಿಂತಿದ್ದು ಕೈಯಲ್ಲಿ ಸೆಲ್ಯೂಲಾರ್ ಫೋನ್ ಹಿಡಿದಿರುವ ಹಾಗೆ ಏನೋ ಫೋಟೋಗಳು ಪೇಪರಿನ

ಮುಖಪುಟಗಳಲ್ಲಿ ಬಂದಿವೆ. ನಿಮ್ಮ ನಡವಳಿಕೆಯನ್ನು ನಾವು ಇಲ್ಲಿ ನೋಡಿದ್ದೇವೆ. ತಾವು ಪಕ್ಷಾತೀತವಾಗಿ ನಡೆದುಕೊಂಡಿದ್ದೀರಿ. ಅನೇಕ ಸಾರಿ ನಮಗೂ ನಿಮಗೂ ವಾದವಿವಾದ ಆಗಿರಬಹುದು, ಮಾತಿನ ಚಕಮಕಿ ನಡೆದಿರಬಹುದು, ಕೆಲವು ಸಲ ನಾವು ಬೇಸತ್ತು ಯಾವುದಾದರೂ ಸಬ್ಜೆಕ್ಟ್‌ನಲ್ಲಿ ಮಿತಿಮೀರಿ ವರ್ತನೆ ಮಾಡಿದಾಗ ಅದಕ್ಕೆ ಕಡಿವಾಣ ಹಾಕಬೇಕೆಂದು ತಾವು ಕೆಲವು ಮಾತುಗಳನ್ನು ಆಡಿರಬಹುದು ಅಥವಾ ತಮಗೆ ಮನಸ್ಸು ನೋವಾಗತಕ್ಕಂಥ ರೀತಿಯಲ್ಲಿ ನಾವು ಆಗಲೀ ಅಥವಾ ಆಡಳಿತ ಪಕ್ಷದವರಾಗಲೀ ಮಾತನಾಡಿರಬಹುದು. ಅದೆಲ್ಲವನ್ನೂ ಕೂಡ ಸರಿಪಡಿಸಿಕೊಂಡು ತಾವು ಬಹಳ ನಿಷ್ಪಕ್ಷಪಾತವಾಗಿ ನಡೆದುಕೊಳ್ಳತಕ್ಕಂಥ ಕೀರ್ತಿಯನ್ನು ಪಡೆದಿದ್ದೀರಿ. ತಾವು ಕಳೆದ ಮೂರೂವರೆ ವರ್ಷಗಳಿಂದ ನಡೆದುಕೊಂಡು ಬಂದಂಥ ದಾರಿ ನೋಡುವಾಗ ಮತ್ತು ನಿಮ್ಮ ಮೇಲೆ ಇವತ್ತಿನ ಪತ್ರಿಕೆಯಲ್ಲಿ ಬರೆದಿರುವಂಥದ್ದನ್ನು ನೋಡಿದಾಗ ಹಾಗೂ ನಿನ್ನೆ ತಾವು ಆ ಮೀಟಿಂಗ್‌ಗೆ ಅಟೆಂಡ್ ಆಗಿದ್ದುದ್ದನ್ನು ಪತ್ರಿಕೆಗಳಲ್ಲಿ ಬಂದಿರುವ ಫೋಟೋಗಳ ಮೂಲಕ ನೋಡಿದಾಗ 'ಇಲ್ಲಿಯವರೆಗೆ ಯಾವುದರಲ್ಲೂ ಭಾಗಿಯಾಗದಿರತಕ್ಕಂಥ ಅಧ್ಯಕ್ಷರು', ನಾವು ಈ ಸದನದಲ್ಲಿ ಯಾವುದೇ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗಲೂ ಕೂಡ - 'ಇದು ನನಗೆ ಸಂಬಂಧಪಟ್ಟಿದ್ದಲ್ಲ ನಾನು ಬೇಕಾದರೆ ನನ್ನ ಗುಡ್ ಆಫೀಸರ್ಸ್ ಅನ್ನೂ ಸದನದ ಕಾರ್ಯಕಲಾಪ ಒಳ್ಳೆಯ ರೀತಿಯಿಂದ ನಡೆಸುವುದಕ್ಕೆ ಉಪಯೋಗ ಮಾಡುತ್ತೇನೆ ಅಥವಾ ರಾಜ್ಯದ ಜನರ ಹಿತದೃಷ್ಟಿಯಿಂದ ಏನಾದರೂ ಸಮಸ್ಯೆ ನನ್ನಿಂದ ಪರಿಹಾರವಾಗಬೇಕಾದರೆ ಅದರಲ್ಲಿ ನಾನು ಭಾಗಿಯಾಗುತ್ತೇನೆ, ಆದರೆ ನಾನು ಅವರಿಗೆ ಹೇಳುವ ಮಟ್ಟದಲ್ಲಿಯಾಗಲೀ, ಅವರಿಗೆ ಒತ್ತಡ ತರತಕ್ಕಂಥ ಮಟ್ಟದಲ್ಲಿ ಆಗಲಿ ಸಾಧ್ಯವಿಲ್ಲ' ಎನ್ನುವಂಥ ಮಾತನ್ನು ತಾವು ಪದೇ ಪದೇ ಹೇಳಿದ್ದಿರಿ. ಆದರೆ ಪತ್ರಿಕೆಗಳಲ್ಲಿಯ ಮುಖಪುಟಗಳಲ್ಲಿ ಬಂದಿರುವಂಥ ಫೋಟೋಗಳನ್ನು ನೋಡಿದಾಗ - ಈ ಫೋಟೋಗಳು ಪತ್ರಿಕೆಗಳಲ್ಲಿ ಏಕೆ ಬಂತು? ಅಧ್ಯಕ್ಷರು ಆ ಸಭೆಗೆ ಏಕೆ ಹೋದರು? ಅಲ್ಲಿಗೆ ಹೋಗಲು ಏನು ಕಾರಣ ಇತ್ತು? ಎನ್ನತಕ್ಕಂಥ ಸಂಶಯ ನಮಗಷ್ಟೇ ಅಲ್ಲ, ಈ ವಿಷಯ ಎಲ್ಲಾ ಪತ್ರಿಕೆಗಳಲ್ಲೂ ಬಂದು, ವಿಶೇಷವಾಗಿ ಇಂಗ್ಲೀಷ್ ಪತ್ರಿಕೆಯಲ್ಲಿ ಬಂದಿರುವುದರಿಂದ ಇದು ಸ್ವಾಭಾವಿಕವಾಗಿ ನಮ್ಮ ಭಾರತದೇಶದಲ್ಲಿ ಇರತಕ್ಕಂಥ ಎಲ್ಲಾ ಅಸೆಂಬ್ಲಿ ಸ್ಪೀಕರ್‌ಗಳು, ಎಲ್ಲಾ ಶಾಸಕರು, ಪಾರ್ಲಿಮೆಂಟ್‌ನ ಸದಸ್ಯರುಗಳು ಹೀಗೆ ಎಲ್ಲಾ ಪ್ರತಿನಿಧಿಗಳು ಓದುತ್ತಾರೆ ಮತ್ತು ಏಕೆ ಹೀಗೆ ಮಾಡಿದರು ಎನ್ನುವಂಥ ಪ್ರಶ್ನೆ ಕೂಡ ಬರುತ್ತದೆ. ಆದ್ದರಿಂದ ಇಲ್ಲಿಯವರೆಗೆ ತಾವು ಈ ಒಂದು ವಿಷಯದಲ್ಲಿ ಬಹಳ ಅಲಿಪ್ತರಾಗಿ ಇದ್ದವರು, ತರಾತುರಿಯಲ್ಲಿ ಸಂಸದೀಯ ಮಂಡಲಿಯ ಸಭೆಯಲ್ಲಿ ಭಾಗವಹಿಸತಕ್ಕಂಥದ್ದು ಅಥವಾ ಯಾರಾದರೂ ನಿಮ್ಮ ಕ್ಯಾಂಡಿಡೇಟ್ ಇದ್ದರೋ ಏನೋ ಗೊತ್ತಿಲ್ಲ. ಅಥವಾ ಯಾವ ಕ್ಯಾಂಡಿಡೇಟನ್ನು ಪ್ರಪೋಸ್ ಮಾಡುವುದಕ್ಕೆ ಹೋಗಿದ್ದೀರೋ ಅದು ಕೂಡ ಗೊತ್ತಿಲ್ಲ. ಅಥವಾ ಯಾರ ಮೇಲೆ ಒತ್ತಡ ತರತಕ್ಕಂಥದ್ದು ಇತ್ತೋ ಅದು ಗೊತ್ತಿಲ್ಲ. ಅಥವಾ ತಾವು ಆ ಸಭೆಗೆ

ಹೋಗುವುದರಿಂದ ಪಕ್ಷದಲ್ಲಿ ಏನಾದರೂ ಒಡಕು ಇದ್ದು ಅದಕ್ಕೆ ಏನಾದರೂ ಬೆಸುಗೆ, ಒಂದು ಮಾಡುವುದಕ್ಕೆ ಹೋಗಿದ್ದೀರೋ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ನಮಗೂ ಕೂಡ ಸಂಶಯ ಬರುತ್ತದೆ ಮತ್ತು ಬೇರೆಯವರಿಗೆ ಸಹ ಸಂಶಯ ಬರುವಂಥ ರೀತಿಯಲ್ಲಿ ಒಂದು ವಾತಾವರಣ ತಯಾರಾಗಿದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಕೂಡ ತನ್ನ ನಿಲುವನ್ನು ಹೇಳಬೇಕು. ಮತ್ತು ತಾವು ಕೂಡ ಇದರ ಬಗ್ಗೆ ಸ್ಪಷ್ಟಪಡಿಸಬೇಕು.

MR. SPEAKER: Don't bring in them. It is between the Speaker.....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ದಯವಿಟ್ಟು ಇದರ ಬಗ್ಗೆ ತಾವು ಸದನಕ್ಕೆ ತಿಳುವಳಿಕೆ ಕೊಡಬೇಕು. ಈ ಸದನದ ಮುಖಾಂತರ ಈ ರಾಜ್ಯದ ಜನತೆಗೆ ಮಾತ್ರವಲ್ಲ ಇಡೀ ಭಾರತದೇಶದ ಜನರಿಗೂ ಕೂಡ ಈ ಸಂಗತಿಗಳು ಮುಟ್ಟಬೇಕು. ಯಾವ ಕಾರಣಕ್ಕೋಸ್ಕರ ಸಂಸದೀಯ ಮಂಡಲಿ ಸಭೆ ನಡೆಯುವಾಗ ಹೋಗಿದ್ದರು ಎನ್ನುವುದು ಸ್ಪಷ್ಟವಾಗಿ ಗೊತ್ತಾಗಬೇಕು. ನಮಗೆ ತಿಳಿದ ಪ್ರಕಾರ - ಅಲ್ಲಿ ಪಕ್ಷದ ರಾಜಕಾರಣ ನಡೆದಿದ್ದು ಅದರಲ್ಲಿ ಭಾಗಿಯಾಗುವುದಕ್ಕೆ ತಾವು ಹೋಗಿದ್ದಿರಿ ಮತ್ತು ಅಲ್ಲಿ ನಡೆದಂಥ ಸಭೆಯಲ್ಲಿ ಪಾಲ್ಗೊಂಡರು ಎನ್ನತಕ್ಕಂಥ ಮಾಹಿತಿ ಕೂಡ ಬಂದಿದೆ. ಇದನ್ನು ಕೆಲವು ಪತ್ರಿಕೆಗಳು ಡಿಸೈನ್ ಮಾಡಿದ್ದಾರೆ, ಇನ್ನು ಕೆಲವು ಪತ್ರಿಕೆಗಳಲ್ಲಿ ಪಾಲ್ಗೊಂಡಿದ್ದಾರೆ ಎಂದು ಬಂದಿದೆ. ಪಕ್ಷದ ಅಧ್ಯಕ್ಷರಾದ ಶ್ರೀ ಬಿ.ಎಲ್.ಶಂಕರ್ ಅವರು ಇದನ್ನು ಡಿಸೈನ್ ಮಾಡಿದ್ದಾರೆ. ತಾವು ಅಲ್ಲಿಗೆ ಹೋಗಿರುವಂಥದ್ದು ಜನತಾದಳ ಪಕ್ಷದಲ್ಲಿ ಕೂಡ ಅಸಮಾಧಾನವಿದೆ; ಎನ್ನುವಂಥದ್ದು ಕೂಡ ಪತ್ರಿಕೆಯಲ್ಲಿ ಬಂದಿದೆ. 'ತಾವು ಅಲ್ಲಿ ಹೋಗಿ your presence has created dissatisfaction among the leaders and workers. ಎನ್ನುವಂಥ ರೀತಿಯಲ್ಲಿ ಕೂಡ ಬಂದಿದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಇಷ್ಟು ದೊಡ್ಡ ವಿಚಾರ ಇವತ್ತು ಇಡೀ ರಾಜ್ಯದಲ್ಲಿ ಚರ್ಚೆಯಾಗುತ್ತಿದೆ. ಯಾವುದೇ ಸಣ್ಣ ಸಣ್ಣ ವಿಚಾರವಾದರೂ ಕೂಡ ಅದಕ್ಕೆ ಚರ್ಚೆಯಲ್ಲಿಯೇ ಪರಿಹಾರ ಕಂಡುಕೊಳ್ಳಬೇಕು ಎನ್ನುವ ಅಂಶವನ್ನು ಹೇಳುತ್ತೇನೆ. ''ಶಂಕಿತ ಪತ್ನಿಯೊಂದಿಗೆ ಸಂಸಾರ ಚರ್ಚೆಯಿಂದ ಮಾತ್ರ ಪರಿಹಾರ'' ಎಂದು ನಮ್ಮ ಸ್ನೇಹಿತರು ಹೇಳುತ್ತಿದ್ದರು. ಆದರೆ ಇವತ್ತು 'ಸಭಾಧ್ಯಕ್ಷರು' ಕೂಡ ಕರ್ನಾಟಕ ರಾಜ್ಯದಲ್ಲಿ ಚರ್ಚಾವಸ್ತು ಆಗಿರುವಂಥ ಸ್ಥಿತಿ ನಿಜಕ್ಕೂ ನಮಗೆ ಒಂದು ರೀತಿಯ ನೋವು ತಂದಿದೆ. ಕರ್ನಾಟಕ ರಾಜ್ಯದಲ್ಲಿ ತಾವು 'ಸಭಾಧ್ಯಕ್ಷರು' ಆದಾಗಿನಿಂದ ಸರ್ಕಾರ ಮಾಡಿದಂಥ ಲೋಪಗಳನ್ನು ತುಂಬಾ

ಸ್ಪಷ್ಟವಾಗಿ ತಾವು ತಿಳಿಸುತ್ತಾ ಬಂದ್ದಿದ್ದೀರಿ. ಹಾಗೆಯೇ ವಿರೋಧಪಕ್ಷದಲ್ಲಿ ನಾವು ಮಾಡಿದಂಥ ಧರಣಿ ಅಥವಾ ಸಭಾತ್ಯಾಗದ ಸಂದರ್ಭದಲ್ಲಿ ಕೂಡ ಯಾವುದು ಸರಿ ಯಾವುದು ತಪ್ಪು ಎನ್ನುವಂಥ ಅಂಶವನ್ನೂ ಕೂಡ ತಾವು ತಿಳಿಸುತ್ತಾ ಬಂದಿದ್ದೀರಿ. ಹಾಗೂ ವಿಧಾನಸಭಾ ಅಧ್ಯಕ್ಷ ಸ್ಥಾನಕ್ಕೆ ಗೌರವ ತರುವಲ್ಲಿ ತಾವು ಪ್ರಯತ್ನ ಮಾಡುತ್ತಾ ಇರುವಂಥ ಸಂದರ್ಭ ಇಡೀ ರಾಜ್ಯಕ್ಕೆ ಸಮಾಧಾನ ತಂದಿತ್ತು. ಆದರೆ ಕಳೆದ ವಾರ 'ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ, ಕೆಲವು ಸಂದರ್ಭದಲ್ಲಿ ಸರಿಯಾದ ಉತ್ತರ ಸಿಗುವುದಿಲ್ಲ ಎನ್ನುವಂಥ ಅಂಶವನ್ನು ತುಂಬ ನೋವಿನಿಂದ ನಿಮ್ಮ ಹತ್ತಿರ ತೋಡಿಕೊಂಡಾಗ, ಇಡೀ ರಾಜ್ಯವೇ ಒಂದು ರೀತಿಯ ಆಶ್ಚರ್ಯಚಕಿತವಾಗುವ ರೂಪದಲ್ಲಿ ತಮ್ಮ ಮನಸ್ಸಿನಲ್ಲಿರತಕ್ಕಂಥ ಭಾವನೆಯನ್ನು ತಾವು ಕೂಡ ವ್ಯಕ್ತಪಡಿಸಿದಿರಿ. 'ನನ್ನ ಮೇಲೆಯೂ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಕೆಲವು ಮಂತ್ರಿಗಳು ದೂರು ಕೊಡುತ್ತಾರೆಂದು ತಾವು ಹೇಳಿದ್ದನ್ನು' ಕೇಳಿದಾಗ ನಮ್ಮ ಮನಸ್ಸಿಗೆ ನಿಜಕ್ಕೂ ಕೂಡ ನೋವು ಆಯಿತು. ಜೊತೆಗೆ ಈ ಸರ್ಕಾರದ ಬಗ್ಗೆ ತಾತ್ಸಾರ ಕೂಡ ಬಂತು. ಸರ್ಕಾರ ಸಭಾಧ್ಯಕ್ಷರಿಗೆ ಯಾವ ಸ್ಥಾನವನ್ನು ಕೊಡಬೇಕೊ, ಆ ಸ್ಥಾನವನ್ನು ಕೊಟ್ಟಿಲ್ಲ ಎನ್ನುವಂಥ ಅಂಶವನ್ನು ಕೆಲವು ಮಂತ್ರಿಗಳ ನಡವಳಿಕೆಯಿಂದ ತಮ್ಮ ಮನಸ್ಸಿಗೆ ಆದಂಥ ನೋವನ್ನು ತಾವು ವ್ಯಕ್ತಪಡಿಸಿದಿರಿ. ಆಗಲಾದರೂ ಕೂಡ ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕಿತ್ತು. ಈ ನಿಮಿಷದವರೆಗೆ ಸರ್ಕಾರದಿಂದ, ಸಂಬಂಧಪಟ್ಟ ಮಂತ್ರಿಗಳಿಂದ ಅದರ ಬಗ್ಗೆ ರಾಜ್ಯದ ಜನತೆಗೆ ಸ್ಪಷ್ಟನೆ ಸಿಗಲಿಲ್ಲ. ಈ ರೀತಿ ಯಾವ ಮಂತ್ರಿ ಮುಖ್ಯಮಂತ್ರಿಗಳಿಗೆ ದೂರು ಕೊಟ್ಟಿದ್ದಾರೆ ಅಥವಾ ದೂರು ಕೊಟ್ಟಂಥ ಮಂತ್ರಿ ಕೂಡ 'ನಾನು ದೂರು ಕೊಟ್ಟಿದ್ದೆ' ಎಂದು, ಅಥವಾ 'ನನಗೆ ಯಾರಿಂದಲೂ ದೂರು ಬಂದಿಲ್ಲ' ಎನ್ನುವಂಥ ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳದಿರುವ ಸಂದರ್ಭದಲ್ಲಿ 'ಈ ಜನತಾದಳದ ಮಂತ್ರಿಗಳು ಸಭಾಧ್ಯಕ್ಷರ ಮೇಲೂ ದೂರು ಕೊಟ್ಟಿರುವುದು ಸತ್ಯ' ಎನ್ನುವ ಅಂಶ ಈ ನಿಮಿಷದ ತನಕ ರಾಜ್ಯದ ಜನತೆಯ ಮನಸ್ಸಿನಲ್ಲಿ ಉಳಿದಿದೆ. ಇಂಥ ಸಂದರ್ಭದಲ್ಲಿ ಇವತ್ತು ಇಡೀ ರಾಜ್ಯದ ಅನೇಕ ಪತ್ರಿಕೆಗಳ ಮುಖಪುಟದಲ್ಲಿ ಆ ಸಭೆಗೆ ಹೋಗುತ್ತಿರತಕ್ಕಂಥ ಚಿತ್ರ ಬಂದಿದೆ. ಜೊತೆಗೆ ''ಕಳೆದ ಸಭೆಯಲ್ಲಿ ರಮೇಶ್‌ಕುಮಾರ್‌ರವರ ಹೊಸ ವಿವಾದ'' ಈ ರೀತಿಯ ತಲೆಬರಹದಲ್ಲಿ ಪತ್ರಿಕೆಯಲ್ಲಿ ಬಂದಿರುವುದು ಈಗ ಆ ಸ್ಥಾನದ ಬಗ್ಗೆ ಚರ್ಚೆ ಆಗುವಂಥ ಸ್ಥಿತಿ ಬಂತು ಎಂದು ನನ್ನ ಭಾವನೆಯಾಗಿದೆ. ಸಭಾಧ್ಯಕ್ಷರ ಸ್ಥಾನ ಮತ್ತು ರಾಜ್ಯಪಾಲರ ಸ್ಥಾನ ಇವೆರೆಡೂ ಕೂಡ ಪಕ್ಷಾತೀತವಾಗಿ ನೋಡಬೇಕಾದ ಸ್ಥಾನಗಳು. ಹಿಂದೆ ನಾನು ಸದನದಲ್ಲಿ ಪ್ರಸ್ತಾಪ ಮಾಡಿದ್ದೆ ಏನೆಂದರೆ, ರಾಜ್ಯಪಾಲರು ಅಲ್ಪಸಂಖ್ಯಾತರ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಗವಹಿಸಿದ್ದರೆನ್ನುವ ಅಂಶ ಪತ್ರಿಕೆಯಲ್ಲಿ ಬಂದಿತ್ತು ಅದರ ಬಗ್ಗೆ ಹೇಳಿದ್ದೆ. ಆ ಸಂದರ್ಭದಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಸಭಾಧ್ಯಕ್ಷ ಸ್ಥಾನದಿಂದಲೂ ಉತ್ತರ ಬಂದಿತ್ತು, ಅದನ್ನು ಕ್ಲಾರಿಫೈ ಮಾಡಿಕೊಂಡು ಉತ್ತರ ಕೊಡುತ್ತೇವೆಂದು ಹೇಳಿ, ಆ ಸಭೆಯಲ್ಲಿ ಅವರು ಭಾಗವಹಿಸಲಿಲ್ಲವೆನ್ನುವ ಅಂಶವೂ ತಿಳಿದು ಬಂತು. ಇವತ್ತು

ಬಂದಿರುವ ಪ್ರಶ್ನೆ ಎಂದರೆ, ನಿಜಕ್ಕೂ ಸಭೆಗೆ ತಾವು ಹೋಗಿದ್ದಿರಾ ಎನ್ನುವುದು. ಏಕೆಂದರೆ, ಇದನ್ನು ನಾವು ಪ್ರಸ್ತಾಪ ಮಾಡುತ್ತಿರುವ ಸಂದರ್ಭದಲ್ಲಿ, ಮಂತ್ರಿಗಳ ಕಡೆಯಿಂದ ಇದ್ದಕ್ಕಿದ್ದ ಹಾಗೆ ಪಾಯಿಂಟ್ ಆಫ್ ಆರ್ಡರ್ ಬಂತು. ನಿಜಕ್ಕೂ ಅದೊಂದು ರೀತಿಯ ಗೊಂದಲ. ಏಕೆ ಪಾಯಿಂಟ್ ಆಫ್ ಆರ್ಡರ್ ತಂದರೋ ಗೊತ್ತಿಲ್ಲ. ಪತ್ರಿಕೆಯಲ್ಲಿ ಬಂದಿರುವ ಸಂದರ್ಭದಲ್ಲಿ ಈ ರೀತಿ ತುಂಬಾ ಸ್ಪಷ್ಟವಾಗಿ ಸರ್ಕಾರದಿಂದ ಹೇಳಿಕೆ ಬೇಕಾಗುತ್ತದೆ. ಏಕೆಂದರೆ, ತಾವು ಉತ್ತರವನ್ನು ಕೊಡಬಹುದು. ಹಿಂದೆಯೂ ತಾವೇನು ನೋವು ವ್ಯಕ್ತಪಡಿಸಿದ್ದೀರಿ, ಆ ನೋವೀಗೇ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ. ನಿಜಕ್ಕೂ ಆ ಮಂತ್ರಿಗಳಿಂದ ಮುಖ್ಯಮಂತ್ರಿಗಳಿಗೆ ದೂರು ಹೋಗಿದೆಯೋ, ಇಲ್ಲವೋ ಎಂಬ ಬಗ್ಗೆ ಸ್ಪಷ್ಟನೆ ಬಂದಿಲ್ಲ. ಅದಾಗುತ್ತಿರುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಜನತಾದಳದ ಕೆಲವು ವಿಧಾನಪರಿಷತ್ತಿನ ಸದಸ್ಯರ ಆಯ್ಕೆ ವಿಚಾರವಿರಬಹುದು, ಬೇರೆ ಬೇರೆ ವಿಚಾರಗಳಿರಬಹುದು, ತಾವು ಆ ಸಭೆಯಲ್ಲಿ ಭಾಗವಹಿಸಿದ್ದಿರಾ? ಭಾಗವಹಿಸಿದ್ದರೆ, ಅದರಲ್ಲಿ ಭಾಗವಹಿಸಿದ್ದು ಸರಿಯೇ? ಭಾಗವಹಿಸಲಿಲ್ಲವೆಂದರೆ, ಈ ರೀತಿ ಪತ್ರಿಕೆಯಲ್ಲಿ ಬಂದಿರುವುದು ಮಾತ್ರ ಇದು ಸರಿಯೇ? ಆ ಸ್ಥಾನಕ್ಕೆ ತಕ್ಕಂತೆ ತಾವು ನಡೆದುಕೊಳ್ಳುತ್ತಿದ್ದೀರೆಂಬ ಬಗ್ಗೆ ನನಗೂ, ನಮ್ಮ ಪಕ್ಷಕ್ಕೂ ವಿಶ್ವಾಸವಿದೆ. ಇನ್ನೊಮ್ಮೆ ಸಭಾಧ್ಯಕ್ಷ ಸ್ಥಾನದಲ್ಲಿ ತಾವು ಇರುವವರೆಗೂ ಈ ಸದನದಲ್ಲಿ ದಯವಿಟ್ಟು ಚರ್ಚೆಯಾಗಬಾರದು - ಅಥವಾ ನಿಜಕ್ಕೂ ಕೂಡ ರಮೇಶ್‌ಕುಮಾರ್ ಆಗಿ ಆ ಒಂದು ಜನತಾದಳದ ಶಾಸಕನಾಗಿ ತಾವು ಮಂತ್ರಿಮಂಡಲದಲ್ಲಿ ಭಾಗವಹಿಸಬೇಕೆಂಬುದು ತಮ್ಮದು ವೈಯಕ್ತಿಕ ಅಪೇಕ್ಷೆ ಇದ್ದರೆ, ಸಂಬಂಧಪಟ್ಟ ವ್ಯಕ್ತಿಗಳ ಹತ್ತಿರ ಮಾತನಾಡುವುದು ಖಂಡಿತವಾಗಿ ತಪ್ಪಾಗಲಿಕ್ಕಿಲ್ಲ. ಆದರೆ, ಅದನ್ನು ಸಂಬಂಧಪಟ್ಟ ವ್ಯಕ್ತಿಗಳು ಸ್ಪಷ್ಟ ಮಾಡುವುದು, ಬಿಡುವುದು ಆ ಪಕ್ಷಕ್ಕೆ ಸಂಬಂಧಪಟ್ಟ ವಿಚಾರ. ಸಭಾಧ್ಯಕ್ಷ ಸ್ಥಾನದಲ್ಲಿ ತಾವಿರುವವರೆಗೂ ಆ ಸ್ಥಾನದ ಬಗ್ಗೆ, ಆ ಸ್ಥಾನದ ಮಹತ್ವದ ಬಗ್ಗೆ, ಆ ಸ್ಥಾನದ ಪಾವಿತ್ರ್ಯತೆ ಬಗ್ಗೆ ಇಡೀ ರಾಜ್ಯದಲ್ಲಿ ಚರ್ಚೆಯಾಗುವುದಕ್ಕೆ ಅವಕಾಶವಾಗಬಾರದೆಂಬುದು ನನ್ನ ಭಾವನೆ. ಆದುದರಿಂದ, ತಮ್ಮ ಮುಖಾಂತರ, ಸರ್ಕಾರದ ಮುಖಾಂತರ ಸ್ಪಷ್ಟನೆ ಕೇಳುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀ ಎಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ನಿಮ್ಮ ಚುನಾವಣೆಯಾದಾಗ ನಾನು ಅಭಿನಂದಿಸಿ ಮಾತನಾಡಿದೆ. ಸದಸ್ಯರೆಲ್ಲರಿಗೂ ಗೊತ್ತು, ಎಕ್ಸಿಕ್ಯೂಟಿವ್ ಅಥಾರಿಟಿ ಇಲ್ಲ ಎನ್ನುವುದು ಬಿಟ್ಟರೆ, ಗೌರವ ದೃಷ್ಟಿಯಿಂದ ತೆಗೆದುಕೊಂಡರೆ, ಪ್ರೋಟೋಕಾಲ್ ದೃಷ್ಟಿಯಿಂದ ತೆಗೆದುಕೊಂಡರೆ ಅಧ್ಯಕ್ಷರ ಸ್ಥಾನ ಭಾರಿ ಉನ್ನತವಾದುದು ಎನ್ನುವುದು ನನ್ನ ನಂಬಿಕೆ. 1967ನೇ ಇಸವಿಯಲ್ಲಿ ನಾವು ಶಾಸಕರಾಗಿದ್ದಾಗ, ಇಂಥ ವಿಚಾರ, ವರದಿ ಪತ್ರಿಕೆಯಲ್ಲಿ ಬಂದಿದ್ದರೆ ನಾವು ಯಾವ ರೀತಿ ಪ್ರತಿರೋಧಿಸುತ್ತಿದ್ದೆವೋ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಆದರೆ, ಈಗ ಅನುಭವ ಜಾಸ್ತಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಯಾವುದೇ ವಿಧಾನಸಭೆಗಳಲ್ಲಿ

ಬಹುಶಃ ತಮಿಳುನಾಡು ಬಿಟ್ಟರೆ, ತಮಿಳುನಾಡಿನಲ್ಲಿ ಸಭಾಧ್ಯಕ್ಷರಾದವರು ಮುಖ್ಯಮಂತ್ರಿಗಳ ಕಾಲಿಗೆ ಬೀಳುವುದು ಇವೆಲ್ಲಾ ಸಾರ್ವಜನಿಕವಾಗಿ ನಡೆದುಕೊಂಡು ಬಂದಿದೆ. ಇಲ್ಲಿಯೂ ಮುಖ್ಯಮಂತ್ರಿಗಳ ಛೇಂಬರ್‌ಗೆ ಹೋಗುವಂತಹ ಅಧ್ಯಕ್ಷರುಗಳನ್ನೂ ನಾನು ನೋಡಿದ್ದೇನೆ. ತಾವು ಛೇಂಬರ್‌ಗೆ ಹೋಗುವುದಿಲ್ಲ. ಅದು ಗೊತ್ತಿದೆ. ಹೋಗಬಾರದು. ಆ ಸ್ಥಾನದ ಗೌರವವನ್ನು ಕಾಪಾಡಬೇಕಾಗುತ್ತದೆ. ಮುಖ್ಯಮಂತ್ರಿಗಳಿದ್ದರೆ ನಿಮ್ಮ ಛೇಂಬರ್‌ಗೇ ಕರೆಯಿಸಿ ಮಾತನಾಡಬೇಕಾಗುತ್ತದೆ. ನೀವು ಯಾರ ಛೇಂಬರ್ಸ್‌ಗೂ ಹೋಗುವುದಕ್ಕಾಗುವುದಿಲ್ಲ. ಅದು ನಡೆದುಕೊಂಡು ಬಂದಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಅಲ್ಲಲ್ಲಿ ಪಕ್ಷದ ಸಭೆಗಳಿಗೆ ಹೋಗತಕ್ಕ ಪರಿಪಾಠ ಬರುತ್ತಿದೆ, ಇನ್‌ಕ್ಲೂಡಿಂಗ್ ಲೋಕಸಭಾ ಸ್ಪೀಕರ್ಸ್. ಅದೇಕೆ ಹೀಗಾಗುತ್ತಿದೆ? ಇದೊಂದು ಸಂದರ್ಭವನ್ನು ಉಪಯೋಗಿಸಿ ಬಹುಶಃ ನಾವು ಇದಕ್ಕೆ ಪರಿಹಾರವನ್ನು ಹೇಳಬೇಕಾಗುತ್ತದೆ. ಒಂದು ಸಾರಿ ಸ್ಪೀಕರ್ ಸ್ಥಾನ ಅಲಂಕರಿಸಿದ ಮೇಲೆ ಹೌಸ್ ಆಫ್ ಕಾಮನ್ಸ್‌ನಲ್ಲಿ ಏನಾಗುತ್ತದೆಂದರೆ, ಸ್ಪೀಕರ್ ಸ್ಥಾನ ಹೋದರೂ, ಆಟೋಮ್ಯಾಟಿಕ್ ಆಗಿ ಹೌಸ್ ಆಫ್ ಲಾರ್ಡ್ಸ್ ಮೆಂಬರ್ ಆಗುತ್ತಾರೆ. ಚುನಾವಣೆಗೆ ನಿಂತರೆ ಕ್ಯಾಂಡಿಡೇಟ್ ಹಾಕುವುದಿಲ್ಲ. ಇಲ್ಲಿ ರಾಜಕೀಯ ಪಕ್ಷಗಳು ಇಚ್ಛೆ ವ್ಯಕ್ತಪಡಿಸಿ, ಒಬ್ಬರು ಸ್ಪೀಕರ್ ಆಗಿದ್ದು, ಅವರು ಚುನಾವಣೆಗೆ ಸ್ಪರ್ಧಿಸಿದರೆ, ಯಾವುದೇ ರಾಜಕೀಯ ಪಕ್ಷದವರೂ ಅಧಿಕೃತ ಅಭ್ಯರ್ಥಿಯನ್ನೂ ಹಾಕಕೂಡದು. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅಧ್ಯಕ್ಷರಾಗಿರುವವರೂ ಮನುಷ್ಯರೇ ತಾನೇ, ಅವರಿಗೂ ಆಶೋತ್ತರಗಳಿರುತ್ತವೆ. ಅವರಿಗೂ ಇನ್ನೊಂದು ಸಾರಿ ಸಭೆಗೆ ಬರಬೇಕೆನ್ನುವ ಚಪಲವಿರುತ್ತದೆ. ಇವತ್ತು ಏನಾಗಿದೆ ಎಂದರೆ, ಪಕ್ಷದ ದಾಕ್ಷಿಣ್ಯವಿಲ್ಲದಿದ್ದರೆ ಟಿಕೆಟ್ ಇಲ್ಲ, ಟಿಕೆಟ್ ಇಲ್ಲವೆಂದರೆ ಚುನಾವಣೆಯಲ್ಲಿ ಗೆಲ್ಲುವ ಹಾಗೇ ಇಲ್ಲ. ಆದ್ದರಿಂದ, ಪಕ್ಷದ ಮರ್ಜಿಯಲ್ಲೇ ಇರಬೇಕಾದ ವಾತಾವರಣ ಈ ರಾಷ್ಟ್ರದಲ್ಲಿರುವುದು. ಇದಕ್ಕೊಂದು ತುದಿ ಮುಟ್ಟಬೇಕಲ್ಲವೇ? ನಾನು ಭಾರೀ ಸ್ಪಷ್ಟವಾಗಿ, ನನ್ನ ಮನಃಪೂರ್ವಕವಾಗಿ ಹೇಳುವುದೇನೆಂದರೆ, ಎಲ್ಲಾ ರಾಜಕೀಯ ಪಕ್ಷಗಳೂ ಇದಕ್ಕೊಂದು ಕೋಡ್ ಆಫ್ ಕಾಂಡಕ್ಟ್ ಹಾಕಿ. ಸ್ಪೀಕರ್ ಆದವರ ವಿರುದ್ಧ ನಾವು ಒಬ್ಬ ಅಭ್ಯರ್ಥಿಯನ್ನೂ ಹಾಕುವುದಿಲ್ಲವೆನ್ನುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಆಳುವ ಪಕ್ಷ ಲೀಡ್ ತೆಗೆದುಕೊಳ್ಳಬೇಕು. ಆಗ ಏನಾಗುತ್ತದೆಂದರೆ, ಸ್ಪೀಕರ್ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವುದಕ್ಕೆ ಅನುಕೂಲವಾಗುತ್ತದೆ. ಎರಡನೆಯದಾಗಿ, ನಾನು ಬೆಳಿಗ್ಗೆ ಯೋಚಿಸುತ್ತಿದ್ದೆ, ನಮ್ಮ ಸ್ಪೀಕರ್ ಈ ತರಹ ಅಲ್ಲವಲ್ಲಾ, ಮುಖ್ಯಮಂತ್ರಿಗಳ ಛೇಂಬರ್ಸ್‌ಗೇ ಹೋಗುವುದಿಲ್ಲ ಅಂಥದ್ದರಲ್ಲಿ ಸಭೆಗಳಿಗೆ ಹೋಗುವುದೆಂದರೆ ಹೇಗೆ ನಂಬುವುದು? ಮೊದಲನೆ ಯೋಚನೆ ಏನು ಬಂದಿತ್ತೆಂದರೆ ಪತ್ರಿಕೆ ಮೇಲೆ ಪ್ರಿವಿಲೆಜ್ ಹಾಕಬೇಕು ಎಂದು. ಏಕೆಂದರೆ, ನಿಮ್ಮ ಮೇಲೆ, ನಿಮ್ಮ ನಡವಳಿಕೆ ಮೇಲೆ ಅಷ್ಟು ಅಚಲವಾದ ನಂಬಿಕೆ. ಆದರೆ, ಇರಲಿ ನೋಡೋಣ, ಇಲ್ಲಿ ಯಾವ ರೀತಿ ಪ್ರಶ್ನೆ ಉದ್ಭವವಾಗುತ್ತದೆ,

ಕ್ಲಾರಿಫಿಕೇಷನ್ ಸಿಗುತ್ತದೆ, ಈ ವಿಚಾರದ ಸತ್ಯಸಂಗತಿ ಹೊರಬೀಳುತ್ತದೆ ಆಗ ಆಲೋಚನೆ ಮಾಡೋಣವೆಂದು ಅಂದುಕೊಂಡು ನಾವು ಬಂದಿದ್ದಾಯಿತು. ಈ ಸ್ಥಾನ ಕಾಂಟ್ರೋವರ್ಸಿಗೊಳಗಾಗಬಾರದು. ಇದು ನಿರ್ವಿವಾದ ಸಂಗತಿ. ಕಾಂಟ್ರೋವರ್ಸಿಗೆ, ಸಾರ್ವತ್ರಿಕ ಜಿಜ್ಞಾಸೆಗೆ ಸ್ಪೀಕರ್ ಸ್ಥಾನ ಒಳಗಾಯಿತೆನ್ನುವಂತಾಗಬಾರದು. ಅದು ಇರತಕ್ಕದ್ದು ಇಷ್ಟು. ಇದರ ಬಗ್ಗೆ ನೀವೇ ಬೆಳಕು ಚೆಲ್ಲಬೇಕಾಗುತ್ತದೆ. ಜನರಿಗೂ, ನಮಗೂ, ರಾಜ್ಯದ ಜನತೆಗೂ, ಸತ್ಯಸಂಗತಿ ಏನು, ಪರಿಸ್ಥಿತಿ ಏನು, ಏಕೆ ಹೋಗಿದ್ದಿರಿ? ಎಂಬ ಬಗ್ಗೆ ಹೇಳಬೇಕಾಗುತ್ತದೆ. ಬಹುಶಃ ಏಕೆ ಹೋಗಿದ್ದಿರೋ ನಮಗೂ ಗೊತ್ತಿಲ್ಲ. ಬಹುಶಃ ಮುಖ್ಯಮಂತ್ರಿಗಳು ಹುಷಾರಿಲ್ಲವೆಂದು ನೋಡುವುದಕ್ಕೆ ಹೋಗಿದ್ದಿರೋ ಕರ್ಟೆಸಿಯೋ ಅದು ಗೊತ್ತಿಲ್ಲ. ಅದನ್ನು ತಾವೇ ಬಗೆಹರಿಸಬೇಕೆಂಬುದು ನನ್ನ ಅನಿಸಿಕೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ಈಶ್ವರಪ್ಪ ಮತ್ತು ಶ್ರೀ ನಂಜೇಗೌಡರು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು 5 ನಿಮಿಷ ಸಮಯ ತೆಗೆದುಕೊಂಡು ಎಲ್ಲವನ್ನೂ ಸವಿಸ್ತಾರವಾಗಿ ಹೇಳಬೇಕಾಗುತ್ತದೆ. ಅಧ್ಯಕ್ಷರ ಸ್ಥಾನವನ್ನು ಸಾಮಾನ್ಯವಾಗಿ ನಮ್ಮಲ್ಲಿ ಬೆಳೆದು ಬಂದಿರುವ ಪದ್ಧತಿ ಪ್ರಕಾರ ಸ್ವಲ್ಪ ವಯಸ್ಸಾದವರಿಗೆ ಕೊಡುವುದು ಸಂಪ್ರದಾಯ. ಅವರಿಗೆ ಮುಂದಕ್ಕೆ ಹೆಚ್ಚು ರಾಜಕೀಯ ಅಪೇಕ್ಷೆಗಳು ಇರಲಾರದ ಸ್ಥಿತಿ ತಲುಪಿರಬೇಕು, ಗೌರವಯುತವಾಗಿ ಅವರನ್ನು ನೋಡುವ ಸ್ಥಿತಿಯನ್ನು ಅವರು ತಲುಪಿರಬೇಕು. ನನ್ನ ಕೇಸ್‌ನಲ್ಲಿ ಆ ತರಹವಾಗಲಿಲ್ಲ. ನಾನೆಂದೂ ಯಾವ ಅಧಿಕಾರಕ್ಕೂ ಇದು ಬೇಕು, ಅದು ಬೇಕು ಎಂದು ಕೇಳಿದವನೂ ಅಲ್ಲ, ಕೇಳತಕ್ಕ ಅರ್ಹತೆಯೂ ನನಗಿಲ್ಲ. ನನಗಿಂತಲೂ ಹಿರಿಯರಿದ್ದರು. ಏನು ಕಾರಣವೋ, ಏನೋ ನನಗೆ ಈ ಜವಾಬ್ದಾರಿ ಕೊಟ್ಟರು. ನಾನು ಸಂತೋಷವಾಗಿ ಒಪ್ಪಿಕೊಂಡೆ. ಒಪ್ಪಿಕೊಂಡ ದಿವಸದಿಂದ ಈ ದಿನದವರೆಗೆ ಒಂದು ರೀತಿಯ ಬಾಲ್ಯ ವಿಧವೆ ಇದ್ದ ಹಾಗೆ ಅಂದರೆ ಬಾಲ್ಯ ವಿಧವೆಗೆ ಶಾರೀರಕವಾಗಿ ಬಯಕೆಗಳಿದ್ದರೂ ಕೂಡ, ಸಮಾಜದ ದೃಷ್ಟಿಯಲ್ಲಿ ಅವಳು ವಿಧವೆಯೇ. ಆದ್ದರಿಂದ, ಕಟ್ಟುನಿಟ್ಟಾಗಿ ಬದುಕಬೇಕು, ನಾನು ಈ ಸ್ಥಿತಿಯಲ್ಲಿ ಬದುಕಿದ್ದೇನೆ. ಅಂದಿನಿಂದ ಇಂದಿನವರೆಗೆ ಎರಡು ಪಾರ್ಲಿಮೆಂಟರಿ ಚುನಾವಣೆಗಳು ಆಗಿವೆ, ನನ್ನ ಕ್ಷೇತ್ರದ ಮುನಿಸಿಪಾಲಿಟಿ ಚುನಾವಣೆಯಾಗಿದೆ, ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ಚುನಾವಣೆಯಾಗಿದೆ, ತಾಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆಗಳಾಗಿವೆ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಚುನಾವಣೆಯಾಗಿದೆ ಯಾವ ಚುನಾವಣೆಯಲ್ಲೂ ಒಂದು ದಿವಸ ಕೂಡ ನಾನು ಕಾಲಿಟ್ಟಿಲ್ಲ. ಈ ಸಲದ ಪಾರ್ಲಿಮೆಂಟರಿ ಚುನಾವಣೆಯಲ್ಲಿ 22 ದಿವಸ ನಾನು ಹಳ್ಳಿಯಲ್ಲಿದ್ದೆ. ಬೆಳಿಗ್ಗೆ ಒಂದು ಗಂಟೆ ನನ್ನ ಜಮೀನಿನ ಹತ್ತಿರ ಹೋಗಿ ಬರುತ್ತಿದ್ದೆ. ನನ್ನ ಮನೆಯ ಕಾಂಪೌಂಡ್ ದಾಟಿ ಹೊರಗೆ ಹೋಗಲಿಲ್ಲ. ಇದು ನಾನು ನಡೆಸಿಕೊಂಡು ಒಂದು ರೀತಿ. ಅಧಿಕಾರದ ಹಂಚಿಕೆಗೆ,

ಯಾವ ಬೋರ್ಡ್ ಬಂತೋ, ಯಾವ ಕಾರ್ಪೊರೇಷನ್ ಬಂತೋ, ಯಾರು ಛೇರ್ಮನ್ ಆದರೋ, ಯಾರು ಮಂತ್ರಿಗಳಾದರೋ ಯಾವುದಕ್ಕೂ ನಾನು ಯಾವತ್ತೂ ಹಸ್ತಕ್ಷೇಪ ಮಾಡಿದವನಲ್ಲ. ನನ್ನ ಕ್ಷೇತ್ರದಿಂದ ನನ್ನ ಕಾರ್ಯಕರ್ತರು ಯಾರು, ನನ್ನ ಹಿಂದಿರುವವರು, ಮುಂದಿರುವವರು ಯಾರು, ಯಾರನ್ನು ಏನು ಮಾಡಬೇಕು, ಎಂಬ ಬಗ್ಗೆ ನಾನು ಕೇಳಿದವನೂ ಅಲ್ಲ, ಅವರು ವಿಚಾರಿಸಿದವರೂ ಅಲ್ಲ. ಅನೇಕ ಸಲ ನಾನು ಚುನಾವಣೆಗೆ ನಿಲ್ಲದೇ ಹೋದರೂ ಚಿಂತೆ ಇಲ್ಲ, ರಾಜಕೀಯವಾಗಿ ರಿಟಾಯಿರ್ಡ್ ಆದರೂ ಪರ್ವಾಗಿಲ್ಲ, ಗೌರವವಾಗಿ ಮನೆಗೆ ಹೋಗಬೇಕೆನ್ನುವ ಒಂದು ಮನೋನಿಶ್ಚಯದ ಮೇಲೇ ಇಲ್ಲಿಯವರೆಗೆ ಕೆಲಸ ಮಾಡಿಕೊಂಡು ಬಂದಿದ್ದೇನೆ. ಕ್ಷೇತ್ರದ ಸಮಸ್ಯೆಗಳಿದ್ದಾಗ ಅವರೊಬ್ಬರಿಗೆ, ಇವರೊಬ್ಬರಿಗೆ ಸಮಸ್ಯೆ ಬಗ್ಗೆ ಹೇಳಿರಬಹುದು. ಕೆಲವರು ಮಾಡಿರುತ್ತಾರೆ, ಕೆಲವರು ಮಾಡಿರುವುದಿಲ್ಲ. ಅವರಿಗೆ ಅವರದ್ದೇ ಆದ ತೊಂದರೆಗಳಿರುತ್ತವೆ, ಅದನ್ನು ನಾನು ದೊಡ್ಡ ವಿಷಯವೆಂದು ಇಲ್ಲಿ ಹೇಳಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ.

11.40 ಎ.ಎಂ.

ನನ್ನ ವೈಯಕ್ತಿಕ ಕಾರಣಗಳಿಂದಾಗಿ ಒಂದು ವಾರದಿಂದ ಅಧಿವೇಶನಕ್ಕೆ ಬರುವುದಕ್ಕಾಗಲಿಲ್ಲ. ಇದಕ್ಕೂ ಕೂಡ ನಾನಾ ರೀತಿಯ ಊಹಾಪೋಹಗಳು ಎದ್ದಿದ್ದವು. ಮಾನ್ಯ ಮುಖ್ಯಮಂತ್ರಿಗಳು ಜಿಂದಾಲ್ ಆಸ್ಪತ್ರೆಯಲ್ಲಿ ಇದ್ದುದ್ದರಿಂದ ನಾನು ಅವರನ್ನು ಕಂಡಿರಲಿಲ್ಲ. ಅವರನ್ನು ನೋಡಬೇಕೆಂದು ನಿನ್ನೆ ಭಾನುವಾರ ಹೋಗಿ ಬರುವುದೇ ಒಂದು ದೊಡ್ಡ ಕೆಲಸವಾಯಿತು. ಅಲ್ಲಿಗೆ ಕೆಲವು ಮುಖಂಡರುಗಳು ಹೋಗುತ್ತಿರುವ ವಿಷಯ ನನಗೆ ಗೊತ್ತಿರಲಿಲ್ಲ. ನಾನು ಅಲ್ಲಿಗೆ ಹೋಗಿ ಮುಖ್ಯಮಂತ್ರಿಗಳನ್ನು ನೋಡಬೇಕೆಂದಾಗ, ಪರವಾಗಿಲ್ಲ ಬನ್ನಿ ಅವರನ್ನು ವಿಚಾರಿಸುವುದಕ್ಕೆ ತಾನೇ ಹೋಗುತ್ತಿರುವುದು ಬನ್ನಿ ಹೋಗೋಣ ಎಂದರು. ಅಲ್ಲಿಂದ ಜಿಂದಾಲ್ ಆಸ್ಪತ್ರೆಯ ಎದುರಿಗಿರುವ ಗೆಸ್ಟ್‌ಹೌಸ್‌ಗೆ ಹೋದೆವು. ನಾನು ಅಲ್ಲಿಗೆ ಹೋಗುವ ವೇಳೆಗಾಗಲೇ ಅಲ್ಲಿ ಕೆಲವರು ಒಳಗಡೆ ಕುಳಿತುಕೊಂಡಿದ್ದರು, ಅಲ್ಲಿ ಏನು ಸಭೆ ನಡೆಯುತ್ತದೆ ಎಂಬುದೂ ಕೂಡ ನನಗೆ ಪೂರ್ಣವಾದ ಅಂದಾಜು ಇರಲಿಲ್ಲ. ನಾನು ಅಲ್ಲಿ ಹೊರಗಡೆ ನಿಂತುಕೊಂಡಿದ್ದ ಸಂದರ್ಭದಲ್ಲಿ ಕೆಲವು ಪತ್ರಿಕಾ ಛಾಯಾಗ್ರಾಹಕರು ನನ್ನ ಭಾವಚಿತ್ರವನ್ನು ತೆಗೆದುಕೊಂಡರು. ಅದು ಅವರು ಮಾಡಬೇಕಾದ ಕರ್ತವ್ಯ, ಅವರು ಮಾಡಿದ್ದಾರೆ. ಅದನ್ನು ನಾನು ತಪ್ಪು ಎಂದು ಭಾವಿಸುವುದಿಲ್ಲ. ನಂತರ ಕಾಫಿ ಕುಡಿದು ಹೋಗೋಣ ಎಂದು ಅಲ್ಲಿ ಅದೊಂದು ಇದೊಂದು ವಿಚಾರ ಮಾತನಾಡುತ್ತಿದ್ದರು. ನನಗೆ ಮಾತ್ರ ನನ್ನ ಮನಸ್ಸಿನಲ್ಲಿ ಒಂದು ರೀತಿಯ ಮುಜುಗರವಾಗುತ್ತಿತ್ತು. ಆದರೆ ಅದು ಜನತಾದಳದ ಸಭೆಯಾಗಲಿ, ನಿಯಮಗಳನುಸಾರಾವಾಗಿ ಅವರು ನನಗೆ ನೋಟೀಸ್ ಕೊಟ್ಟು ನೀವು ಒಬ್ಬ ಸದಸ್ಯರು ಇಲ್ಲಿ ಭಾಗವಹಿಸಬೇಕೆಂದಾಗಲಿ, ಅಥವಾ ಯಾವುದೋ ಒಂದು ಕ್ಯಾಂಡಿಡೇಟ್ ಇಟ್ಟುಕೊಂಡು ಹೋಗಿದ್ದಾಗಲಿ, ಇದು

ಯಾವುದೂ ನನ್ನಲ್ಲಿ ಇರಲಿಲ್ಲ. ನನಗೆ ಯಾವ ಕ್ಯಾಂಡಿಡೇಟ್ ಇರಲಿಲ್ಲ. ಯಾರನ್ನೂ ತಪ್ಪಿಸುವ ಅಥವಾ ಉದ್ಧಾರ ಮಾಡುವ ಉದ್ದೇಶ ನನಗಿರಲಿಲ್ಲ. ಆದರೆ ನಾನು ಅಲ್ಲಿ ಇದ್ದದ್ದು ನಿಜ. ಆದರೆ ಅಲ್ಲಿ ಏನಾಯಿತೋ, ಏನೋ ಒಟ್ಟಿನಲ್ಲಿ ಒಂದು ರೀತಿಯ ಮುಜುಗರಕ್ಕೆ ಸಿಕ್ಕಿ ಹಾಕಿಕೊಂಡೆನಲ್ಲಾ ಎಂದುಕೊಂಡು ಬಹಳ ಬೇಸರ ಮಾಡಿಕೊಂಡು ನಾನು ವಾಪಸ್ ಬಂದೆ. ಇದು ನಿನ್ನೆಯ ಪರಿಸ್ಥಿತಿ. ನಾನು ಸಕ್ರಿಯವಾಗಿ ಜನತಾದಳದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಕ್ಕೆ ನನಗೆ ಯಾವ ಅಡೆತಡೆ ಇರಲಿಲ್ಲ. ಇದುವರೆವಿಗೂ ಬೇಕಾದರೆ ನಾನು ಈ ಕಾರ್ಯದಲ್ಲಿ ಪಾಲ್ಗೊಳ್ಳಬಹುದಾಗಿತ್ತು. ಆದರೆ ಈ ಸ್ಥಿತಿಯಲ್ಲಿ ಈ ಕಾರ್ಯ ಮಾಡಬೇಕಾದ ಅವಶ್ಯಕತೆ ನನಗಿರಲಿಲ್ಲ. ಪಕ್ಷದ ಕೆಲಸ ಮಾಡತಕ್ಕಂಥ ಇರಾದೆ ಕೂಡ ನನಗಿಲ್ಲ. ಬೇರೆಯವರೆಲ್ಲರೂ ಸಭಾಧ್ಯಕ್ಷರಾಗಿ ಚುನಾಯಿತರಾದ ಮೇಲೆ ರಾಜೀನಾಮೆ ಕೊಟ್ಟಿದ್ದಾರೆ. ಆದರೆ ನಾನು ನನ್ನನ್ನು ಸಭಾಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದ ತಕ್ಷಣವೇ ಜನತಾದಳದ ಕಛೇರಿಗೆ ಹೋಗಿ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟು ಬಂದಿದ್ದೇನೆ. ನನ್ನ ತಿಳುವಳಿಕೆಗೆ ಬಂದ ಹಾಗೆ, ಈ ಕುರ್ಚಿಗೆ ಅಪಮಾನ ಮಾಡತಕ್ಕಂಥ ಕೆಲಸವಾಗಲಿ, ಸ್ವಾರ್ಥಕ್ಕಾಗಿ ಏನು ಬೇಕಾದರೂ ಅದನ್ನು ಮಾಡತಕ್ಕಂಥ ಮಟ್ಟಿಗೆ ನಾನು ಇಳಿದಿಲ್ಲ. ಜಿಂದಾಲ್ ಆಸ್ಪತ್ರೆಯನ್ನೇ ಜನತಾದಳದ ಕಛೇರಿ ಎಂದು ಕೆಲವು ಪತ್ರಿಕೆಗಳು ಭಾವಿಸುವುದಾದರೆ ಅದಕ್ಕೆ ನಾನು ಅಸಹಾಯಕನಾಗುತ್ತೇನೆ. ಅನಾರೋಗ್ಯದಿಂದ ಬಳಲುತ್ತಿರುವ ಒಬ್ಬ ಮುಖ್ಯಮಂತ್ರಿಯನ್ನು, ಸಭಾಧ್ಯಕ್ಷನಾಗಿ ನೋಡತಕ್ಕಂಥದ್ದು ಕೂಡ ಪ್ರೋಟೋಕಾಲ್ ಪ್ರಕಾರ ತಪ್ಪು ಎನ್ನುವುದಾದರೆ ಇದಕ್ಕೂ ಕೂಡ ನಾನು ಅಸಹಾಯಕನಾಗುತ್ತೇನೆ. ಆದರೆ ಸಭೆ ಇದ್ದದ್ದು, ಅಲ್ಲಿಗೆ ನಾನು ಹೋಗಿದ್ದು, ಎಲ್ಲಾ ಒಟ್ಟಿಗೆ ಗ್ರಹಚಾರ. ಪತ್ರಿಕೆಯವರು ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಬರೆಯುವುದಕ್ಕೆ ಅರ್ಹರು. ಅವರನ್ನು ನಾನು ಹೀಗೆ ಬರೆಯಬೇಕು, ಹಾಗೆ ಬರೆಯಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಕಳೆದ ಮೂರು ವರ್ಷಗಳಿಂದಲೂ ಕೂಡ ಪತ್ರಿಕೆಯವರು ವಿಶೇಷವಾದ ಪ್ರೀತಿ, ಗೌರವಗಳನ್ನು ನನಗೆ ತೋರಿಸಿ, ಸಹಕಾರ ಕೊಟ್ಟಿದ್ದಾರೆ. ನಾನು ಅವರ ವಿಚಾರವಾಗಿ ಕೆಟ್ಟದಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಪತ್ರಿಕೆಯವರು ಬರೆಯುವುದಕ್ಕಿಂತ ಮುಂಚೆ ನನ್ನನ್ನು ಸ್ಪಷ್ಟೀಕರಣ ಕೇಳಿದ್ದರೆ ಚೆನ್ನಾಗಿತ್ತು. ನನ್ನ ಮನಸ್ಸಿಗೆ ಬೇಜಾರಾಗಿದ್ದು ಏನೆಂದರೆ, ಈ ವಿಚಾರ ಎಲ್ಲಾ ಸಂಜೆ ಪತ್ರಿಕೆಗಳಲ್ಲಿ ಮತ್ತು ಇವತ್ತಿನ ಕೆಲ ಪತ್ರಿಕೆಗಳಲ್ಲಿ ಬಂದಿದೆ, ಹೀಗಿರುವಾಗ, ಇವತ್ತು ಅಧಿವೇಶನ 11 ಗಂಟೆಗೆ ಇರುವುದರಿಂದ, ನಾನು ಬೆಳಿಗ್ಗೆ 10-30ಕ್ಕೆ ಬಂದು ನನ್ನ ಕೊಠಡಿಯಲ್ಲಿ ಕುಳಿತುಕೊಂಡಿದ್ದೆ, ಆಗ ಮಾನ್ಯ ಈಶ್ವರಪ್ಪನವರು ದೂರವಾಣಿ ಮುಖಾಂತರ ನನ್ನನ್ನು ಮಾತನಾಡಿಸಿ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿದರು. ಅದೇ ರೀತಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ನನ್ನ ಕೊಠಡಿಗೆ ಬಂದು, ನನ್ನ ಹತ್ತಿರ ಕುಳಿತುಕೊಂಡು ಇದರ ಬಗ್ಗೆ ಚರ್ಚೆ ಮಾಡಿದರು. ಆದರೆ ಆಡಳಿತ ಪಕ್ಷದ ವತಿಯಿಂದ ಯಾರೂ ಕೂಡ ''ತಮಗೆ ಹೀಗಾಗಿದೆಯಲ್ಲಾ, ಮುಜುಗರದಿಂದ ತಮ್ಮ ಮನಸ್ಸಿಗೆ ನೋವಾಗಿದೆಯೇ'' ಎಂದು

ಕನಿಷ್ಠ ಸೌಜನ್ಯಕ್ಕಾದರೂ ಯಾರೂ ಕೇಳಲಿಲ್ಲ. ಸಂತೋಷ, ಇದು ನನ್ನ ಸೌಭಾಗ್ಯ. ನನ್ನನ್ನು ನಾನು ಡಿಫೆಂಡ್ ಮಾಡಿಕೊಳ್ಳುತ್ತೇನೆ, ಡಿಫೆಂಡ್ ಮಾಡಿಕೊಳ್ಳುವ ಶಕ್ತಿ ನನಗಿದೆ. ಎಲ್ಲಿಯವರೆಗೆ ನಾನು ತಪ್ಪು ಮಾಡಿಲ್ಲ ಎಂದು ನನ್ನ ಮನಸ್ಸಿಗೆ ಬರುತ್ತದೆಯೋ ಅಲ್ಲಿಯವರೆಗೆ ನನ್ನನ್ನು ನಾನು ಡಿಫೆಂಡ್ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಜನತಾದಳದಲ್ಲಿ ಅಸಂತೃಪ್ತಿ ಮೂಡಿದೆ ಎಂದು ತಾವು ಹೇಳಿದಿರಿ, ಇದು ಯಾವುದೂ ನನಗೆ ಗೊತ್ತಿಲ್ಲ. ಯಾರಿಗೆ ಎಲ್ಲೆಲ್ಲಿ ನಾವು ಇಲ್ಲಿರುವುದರಿಂದ, ಓಡಾಡುವುದರಿಂದ, ರಾಜಕೀಯದಲ್ಲಿರುವುದರಿಂದ ಅತೃಪ್ತಿ, ಅಸಮಾಧಾನ ಉಂಟಾಗಿದ್ದರೆ ಇದಕ್ಕೆಲ್ಲಾ ನಾನು ಕಾರಣ ಅಲ್ಲ. ನಾನು ಯಾವ ಮೌಲ್ಯಗಳನ್ನು, ಆದರ್ಶಗಳನ್ನು ನಂಬಿದ್ದೇನೆ ಇವುಗಳಿಂದ ಕೆಲವರಿಗೆ ಅತೃಪ್ತಿಯಾಗಿದ್ದರೆ ನಾನು ನನ್ನ ಮೌಲ್ಯಗಳನ್ನಾಗಲಿ, ಆದರ್ಶಗಳನ್ನಾಗಲಿ, ಬದಲಾಯಿಸಿಕೊಳ್ಳುವುದಕ್ಕೆ ತಯಾರಾಗಿಲ್ಲ ಅಥವಾ ಈ ರೀತಿ ಪ್ರಯತ್ನ ಮಾಡಿ, ಕುಚೇಷ್ಟೆಗಳನ್ನು ಮಾಡುವುದರಿಂದ ನನ್ನನ್ನು ಸ್ವಲ್ಪ ಅಧೀರನನ್ನಾಗಿ ಮಾಡಬಹುದು ಎಂದು ತಿಳಿದಿದ್ದರೆ, ಇಂತಹ ಸಂಚಿಗೆ ಬಲಿಯಾಗತಕ್ಕವನು ನಾನಲ್ಲ. ನಾನು ಸಾಕಷ್ಟು ಹೋರಾಟ ಮಾಡಿಕೊಂಡು ಇಲ್ಲಿಯವರೆವಿಗೂ ತಲುಪಿದ್ದೇನೆ. ಯಾರ ಮುಲಾಜಿನಿಂದ, ಕೃಪೆಯಿಂದ, ಅಥವಾ ಮರ್ಜಿಯಿಂದ ಇಲ್ಲಿಗೆ ಬಂದಿಲ್ಲ. ನನ್ನ ಮತಕ್ಷೇತ್ರದಲ್ಲಿ ಒಂದೊಂದು ಚುನಾವಣೆಯಲ್ಲಿ ನಾನು ಆರಿಸಿಬರಬೇಕಾದರೆ, ಪುನಃ ತಾಯಿಯ ಗರ್ಭದಿಂದ ಹೊರಗೆ ಬಂದಂಥಾಗಿದೆ. ಜನರ ಪ್ರೀತಿಯನ್ನು, ಸಿಟ್ಟನ್ನು, ಎರಡನ್ನೂ ಕೂಡ ಒಂದೇ ರೀತಿಯಲ್ಲಿ ನಾನು ಅನುಭವಿಸಬೇಕಾಗಿದೆ. ಸಾರ್ವಜನಿಕ ಜೀವನದಿಂದ ನಿವೃತ್ತನಾಗಿ ನಾನು ಓಡಿ ಹೋಗುವುದಕ್ಕೆ ತಯಾರಿಲ್ಲ. ಯಾರು ಈ ರೀತಿ ಒಂದು ಮುಜುಗರದ ಸ್ಥಿತಿಯನ್ನು ಉಂಟು ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೋ ಆ ನನ್ನ ಸ್ನೇಹಿತರೆಲ್ಲರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಇದನ್ನು ಮುಂದುವರಿಸಿಕೊಂಡು ಹೋಗಿ ನಾನು ಇದನ್ನು ಎದುರಿಸುವುದಕ್ಕೆ ಸಿದ್ಧವಿದ್ದೇನೆ ಎನ್ನುವ ಮಾತನ್ನು ಹೇಳುತ್ತೇನೆ. ನಾನು ಕುಳಿತುಕೊಳ್ಳುವ ಕುರ್ಚಿಗೆ ಯಾವ ಕಾರಣಕ್ಕೂ ಅಪಮಾನ ಮಾಡುವುದಿಲ್ಲ. ಅಗೌರವ ತರುವುದಿಲ್ಲ. ಪಕ್ಷಾತೀತವಾಗಿ ನಡೆದುಕೊಳ್ಳುತ್ತೇನೆ. ಪಕ್ಷದ ಪರವಾಗಿ ಕೆಲಸ ಮಾಡಬೇಕಾದ ಪರಿಸ್ಥಿತಿ ಉಂಟಾದಾಗ, ನ್ಯಾಯಕ್ಕೆ ಅನ್ಯಾಯ ಮಾಡುತ್ತೇನೆ ಎನ್ನುವ ಅನುಮಾನ ನನ್ನ ಮನಸ್ಸಿನಲ್ಲಿ ಬಂದ ತಕ್ಷಣವೇ ನಾನು ಇಲ್ಲಿ ಇರುವುದಿಲ್ಲ. ಯಾರೂ ಹೇಳಬೇಕಾದ ಅವಕಾಶವನ್ನು ನಾನು ಕೊಡುವುದಿಲ್ಲ. ಇಲ್ಲಿಗೆ ಈ ವಿಚಾರವನ್ನು ಮುಗಿಸೋಣ, ತಮ್ಮೆಲ್ಲರ ಸಹಕಾರವನ್ನು ನಾನು ಬಯಸುತ್ತೇನೆ, ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ನಾನು ಯಾವ ವಿಧವಾದ ಅಪಚಾರವನ್ನು ಮಾಡಿಲ್ಲ. ಪತ್ರಿಕಾ ಸ್ನೇಹಿತರಲ್ಲಿ ನನ್ನ ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ಕನಿಷ್ಠ ಸೌಜನ್ಯಕ್ಕಾದರೂ ನೀವು ನನ್ನನ್ನು ಸ್ಪಷ್ಟೀಕರಣ ಕೇಳಿದ್ದರೆ ನಾನು ಉತ್ತರ ಕೊಡುತ್ತಿದ್ದೆ. ಬಹುಶಃ ತಾವು ಆತುರಪಟ್ಟಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ನಾನು ತಮಗೆ ಹೇಳುವುದೇನೆಂದರೆ, ಯಾರೂ ಈ ವರ್ತಮಾನಗಳನ್ನು

ಕೊಡುತ್ತಾರೋ, ಅವರ ಹಿನ್ನೆಲೆಯನ್ನು, ನನ್ನ ಹಿನ್ನೆಲೆಯನ್ನು ಒಂದು ಕಡೆ ನೋಡಿ, ನಾನು ಹೇಗೆ ಬದುಕುತ್ತಿದ್ದೇನೆ, ಅವರು ಹೇಗೆ ಬದುಕುತ್ತಿದ್ದಾರೆ ಎಂಬುದನ್ನು ನೋಡಿ, ಜಾತಿಯ ವಿಚಾರದಲ್ಲಾಗಲಿ, ಕುಲದ ವಿಚಾರದಲ್ಲಾಗಲಿ, ಬೇರೆಯವರ ವೈಯಕ್ತಿಕ ನಡವಳಿಕೆಯ ವಿಚಾರದಲ್ಲಾಗಲಿ, ಬದುಕುವ ವಿಧಾನದ ಬಗ್ಗೆಯಾಗಲಿ, ದಯಮಾಡಿ ಇವು ಎಲ್ಲಾ ಅಂಶವನ್ನು ತುಲನೆ ಮಾಡಿ ನೋಡಿ. ಏಕೆಂದರೆ, ನೀವು ಆತುರಪಟ್ಟರೆ, ನೀವು ಕೊಡುವ ವರದಿಯನ್ನು ಜನರು ಓದುತ್ತಾರೆ. ಇದರಿಂದಾಗಿ ನಾವು ಅಸಹಾಯಕರಾಗುತ್ತೇವೆ. ನನ್ನ ವಿಚಾರವನ್ನು ಬರೆಸುವುದಕ್ಕೆ ನನ್ನದೇ ಸ್ವತಃ ಒಂದು ಪತ್ರಿಕೆ ಇದೆಯೇ? ನೀವು ಪತ್ರಿಕಾ ಮಾಧ್ಯಮದವರು ನಮ್ಮನ್ನು ರೂಪಿಸತಕ್ಕಂಥವರು, ಬೇಕಾದರೆ ನಮ್ಮನ್ನು ನಿರ್ನಾಮ ಕೂಡ ಮಾಡಬಹುದು. ನನಗೆ ನೀವು ಉಪಕಾರ ಮಾಡಿ ಎಂದು ಕೇಳುತ್ತಿಲ್ಲ, ನ್ಯಾಯ ಮಾತ್ರ ಕೇಳುತ್ತಿದ್ದೇನೆ. ದಯಮಾಡಿ ಈ ವಿಚಾರದಲ್ಲಿ ಸ್ಪಷ್ಟವಾದ ತಿಳುವಳಿಕೆಯನ್ನು ಜನರಿಗೆ ಕೊಡಬೇಕು ಎಂದು ವಿನಂತಿಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್: ನಾವು ಸುಮಾರು 1967ರಿಂದ ಇಲ್ಲಿರತಕ್ಕಂಥವರು, ಮಾನ್ಯ ವೈಕುಂಠಬಾಳಿಗರವರಂತೆ ತಾವು ಇದ್ದೀರಿ ಎನ್ನುವ ಮಾತನ್ನು, ನಾನು ಮತ್ತು ಮಾನ್ಯ ನಂಜೇಗೌಡರು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಒಂದು ಹಂತದಲ್ಲಿ ನಾವು ಮಾತನಾಡುವಾಗ ಯಾರ ಮುಲಾಜಿಗೂ ಒಳಗಾಗದೇ ಇರತಕ್ಕಂಥ, ಪ್ರಾಮಾಣಿಕ ಚಿಂತನೆ ಇರತಕ್ಕಂಥ, ಈ ಪೀಠದಲ್ಲಿರತಕ್ಕಂಥವರ ವಿರುದ್ಧ ಚುನಾವಣೆಯಲ್ಲಿ ಯಾವುದೇ ಪಕ್ಷದವರು ನಿಲ್ಲಿಸಬಾರದು ಎಂದು ಮಾನ್ಯ ನಂಜೇಗೌಡರು ಹೇಳಿದರು. ಇದೇ ಮಾತನ್ನು ನಾನು ಮೊದಲಿನಿಂದ ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಒಂದು ಸದನದ ಅಧ್ಯಕ್ಷರಾಗಿರತಕ್ಕಂಥವರು ಅವರು ಸಂಪೂರ್ಣ ಸ್ವತಂತ್ರರಾಗಿರಬೇಕು. ಸಾಮಾನ್ಯವಾಗಿ ಚುನಾವಣೆಗಳು ಬಂದಾಗ ಅವರನ್ನೇ ಗುರುತು ಇಟ್ಟುಕೊಂಡು, ಆ ಚುನಾವಣೆಯಲ್ಲಿ ಮುಂದಿನ ಸ್ಪೀಕರ್ ಆಗಿ ಆಯ್ಕೆ ಮಾಡಬೇಕಾಗುತ್ತದೆ. ಆದ್ದರಿಂದ ಎಲ್ಲಾ ಪಕ್ಷದವರು ಸೇರಿ ಕನಿಷ್ಠ ಅವಿರೋಧವಾಗಿ ಅವರನ್ನು ಆಯ್ಕೆ ಮಾಡೋಣ. ಈ ಸದನದಲ್ಲಿ ಅವರು ಸ್ವತಂತ್ರವಾಗಿರಬೇಕಾದರೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಕ್ರಮ ಲೋಕಸಭೆಗೂ ಮತ್ತು ಶಾಸನಸಭೆಗೂ ಈ ಒಂದು ವ್ಯವಸ್ಥೆಯನ್ನು ನಾವು ಎಲ್ಲಾ ಪಕ್ಷದವರು ಮಾಡಬೇಕು ಎನ್ನುವುದರಲ್ಲಿ ನನ್ನ ಸಂಪೂರ್ಣ ಸಹಮತ ಇದೆ. ಅಧ್ಯಕ್ಷರು, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಈ ಸದನದ ದೃಷ್ಟಿಯಿಂದ ಬಹಳ ಉನ್ನತವಾದ ಸ್ಥಳ. ತಾವು ಆ ಸ್ಥಳವನ್ನು ಬಿಟ್ಟು, ಚುನಾವಣೆಯಲ್ಲಿ ನಿಂತು, ಯಾವುದೋ ಪಕ್ಷದಿಂದ ಗೆದ್ದು ಬಂದು ಇಲ್ಲಿ ಮಂತ್ರಿಗಳಾಗಿ ಕುಳಿತುಕೊಳ್ಳತಕ್ಕಂಥದ್ದು ಸರಿಯಲ್ಲ. ಅಧ್ಯಕ್ಷರಾದವರು ಮಂತ್ರಿಗಳಾಗುವುದಾಗಲಿ, ಅಥವಾ ಒಂದು ಪಕ್ಷದ ಕಾರ್ಯದರ್ಶಿಯೋ ಅಥವಾ ಅಧ್ಯಕ್ಷನಾಗಿರುವುದು ಒಳ್ಳೆಯದು ಅಲ್ಲ.

ಅಧ್ಯಕ್ಷರು: ಒಂದು ನಿಮಿಷ. ನಾನು ಹೇಳುವುದಕ್ಕೆ ಮರೆತಿದ್ದೆ. ಕೆಲವರು

ಮಂತ್ರಿಮಂಡಲಕ್ಕೆ ಸೇರುವುದಕ್ಕೆ ಹಾತೊರೆಯುತ್ತಿದ್ದಾರೆಂದು ಹೇಳುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಗೌರವದಿಂದ, ನನ್ನ ಮೇಲೆ ಪ್ರೀತಿ, ಅಭಿಮಾನ ಇಟ್ಟು ''ನೀವು ನನ್ನ ಜೊತೆಗೆ ಸಹೋದ್ಯೋಗಿಯಾಗಿ ಮಂತ್ರಿಮಂಡಲಕ್ಕೆ ಸೇರುವುದಕ್ಕೆ ಇಷ್ಟಪಡುತ್ತೀರೋ'' ಎಂದು ಅತ್ಯಂತ ಗೌರವವಾಗಿ ಕೇಳಿದರು. ಆ ಸಂದರ್ಭದಲ್ಲಿ ಮಾನ್ಯ ನಾಣಯ್ಯನವರು ಉಪಸ್ಥಿತರಿದ್ದರು. ಇದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ''ಸಾರ್ ನಾನು ಚಿಕ್ಕವನು, ತಮಗೆ ಒಳ್ಳೆಯದಾಗಲಿ, ನಾನು ಅಧ್ಯಕ್ಷನಾಗಿ ಮುಂದುವರಿಯುವುದಕ್ಕೆ ಇಷ್ಟಪಡುತ್ತೇನೆ'' ಎಂದು ಹೇಳಿದೆ. ಅಧ್ಯಕ್ಷಸ್ಥಾನದಲ್ಲಿದ್ದು ಕೆಳಗಡೆ ಬರುವುದಕ್ಕೆ ನಾನು ಸಿದ್ಧವಿಲ್ಲವೆಂದಾಗ, ಮಾನ್ಯ ಮುಖ್ಯಮಂತ್ರಿಗಳು ಸಂತೋಷದಿಂದ, ಮೆಚ್ಚಿ ಒಪ್ಪಿಕೊಂಡರು. ಇಷ್ಟೆಲ್ಲಾ ಆಗಿದೆ, ಮಾನ್ಯ ಮುಖ್ಯಮಂತ್ರಿಗಳು ಕೂಡ ಪೇಪರ್‌ನವರನ್ನು ಕರೆದು ''ನಾನು ಅವರನ್ನು ಕೇಳಿದ್ದೇನೆ, ಅವರು ಒಪ್ಪಿಕೊಂಡಿಲ್ಲ'' ಎಂದು ಹೇಳಿದ್ದರೂ ಕೂಡ, ಪುನಃ ನೀವು ಮಂತ್ರಿಮಂಡಲಕ್ಕೆ ಸೇರುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದರೆ ಏನರ್ಥ? ಹೇಗೆ ನಾವು ಇದಕ್ಕೆ ಸ್ಪಷ್ಟೀಕರಣ ಕೊಡಬೇಕು? ನಾವು ಹೇಗೆ ಸಾರ್ವಜನಿಕ ಜೀವನದಲ್ಲಿ ಬದುಕಬೇಕೆಂದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್: ಈ ದೃಷ್ಟಿಯಿಂದ, ಈ ಒಂದು ಆದರ್ಶಪಾಲನೆ ನಮ್ಮ ಕರ್ನಾಟಕ ರಾಜ್ಯದಿಂದ ಮುಂದಿನ ಚುನಾವಣೆಯಲ್ಲಿ ಆರಂಭವಾಗಲಿ. ಯಾರು ಅಧ್ಯಕ್ಷರಾಗಿರುತ್ತಾರೋ ಅವರ ವಿರುದ್ಧ ಯಾವುದೇ ಪಕ್ಷವು ಚನಾವಣೆಯಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಬಾರದು. ಏಕೆಂದರೆ ಅವರೇ ಮುಂದಿನ ಅಧ್ಯಕ್ಷರಾಗಿ ಮುಂದುವರಿಯಬೇಕು. ಏಕೆಂದರೆ, ಒಂದು ಸಾರಿ ಅಧ್ಯಕ್ಷರಾಗಿ ಕೆಳಗೆ ಇಳಿದು, ಮುಖ್ಯಮಂತ್ರಿಯಾಗಲಿ, ಮಂತ್ರಿಗಳಾಗಲಿ, ಹೋಗುವುದು ನನ್ನ ದೃಷ್ಟಿಯಲ್ಲಿ ಒಳ್ಳೆಯದಲ್ಲ. ರಾಜಕೀಯವಾಗಿ ಮೇಲೆ ಹೋಗತಕ್ಕಂಥ ವ್ಯವಸ್ಥೆಯಾಗಬೇಕೇ ಹೊರತು ಆ ಪೀಠದಿಂದ ಕೆಳಗೆ ಇಳಿಯತಕ್ಕಂಥ ವ್ಯವಸ್ಥೆ ಆಗಬಾರದು. ಈಗ ತಾವು ತಮ್ಮ ಮನಸ್ಸಿಗೆ ನೋವಾಗಿರುವ ವಿಚಾರವನ್ನು ಹೇಳಿದಿರಿ. ನಾವೆಲ್ಲರೂ ಸ್ನೇಹಿತರಾಗಿ ಮತ್ತು ಬಹಳ ಹತ್ತಿರ ಇರುವ ದೃಷ್ಟಿಯಿಂದ ನಮಗೂ ಸಹ ನೋವು ಆಗಿದೆ. ಕೆಲವು ವಿಚಾರದಲ್ಲಿ ವಾದವಿವಾದಗಳು ಇರಬಹುದು, ಕೆಲವು ವಿಚಾರದಲ್ಲಿ ಸರಿ ಇದೆ ಅಥವಾ ಇಲ್ಲವೆಂದು ನಿಮ್ಮ ಹತ್ತಿರ ಎಷ್ಟೋ ಸಾರಿ ಮಾತನಾಡಿದ್ದೇವೆ. ಆದರೆ ನಿನ್ನೆ ದಿವಸ ಹೋಗಿದ್ದಂತಹ ಪರಿಸ್ಥಿತಿಗೂ, ಆ ಕಾಕತಾಳೀಯ ನ್ಯಾಯಕ್ಕೂ ಒಂದಕ್ಕೊಂದು ಸಂಬಂಧವಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮೊನ್ನೆ ದಿವಸ ನೋಡುವುದಕ್ಕೆ ಹೋಗಿದ್ದೆ. ಬಹುಶಃ ನಾವು ಹೋದರೆ, ಅದಕ್ಕೆ ಏನು ಮಡಿ-ಗಿಡಿ ಇರುವುದಿಲ್ಲ. ಅಂದರೆ ಮುಖ್ಯಮಂತ್ರಿಗಳು ಎಲ್ಲಿದ್ದರೂ ನಾವು ಹೋಗಬಹುದು. ಆದರೆ ಇಲ್ಲಿ ಮಾನ್ಯ ಅಧ್ಯಕ್ಷರು ಹೋದಾಗ, ಇದೇ ಸಂದರ್ಭದಲ್ಲಿ ಜನತಾದಳದ ಸಭೆ ಸೇರಿತ್ತು ಮತ್ತು ಪತ್ರಕರ್ತರು ಹಾಗೂ ಫೋಟೋಗ್ರಾಫರ್ಸ್ ಸೇರಿದ್ದರು ಮತ್ತು ಇದೇ ಸಂದರ್ಭದಲ್ಲಿ

ವಿಧಾನ ಪರಿಷತ್ತಿನ ಚುನಾವಣೆಗೆ ಸೀಟ್‌ಗಳ ತೀರ್ಮಾನಗಳ ಬಗ್ಗೆ ಚರ್ಚೆ ನಡೆದಿತ್ತು. ಆದರೆ ಮಾನ್ಯ ಅಧ್ಯಕ್ಷರು ಯಾವ ಸೀಟ್‌ಗೂ ಹೋದವರಲ್ಲ ಮತ್ತು ಎಂ.ಎಲ್.ಸಿ ಆಗಬೇಕು ಎನ್ನತಕ್ಕಂಥ ಉದ್ದೇಶ ಇರತಕ್ಕಂಥವರೂ ಅಲ್ಲ. ಈಗ ಅವರಿಗೆ ಉಳಿದಿರುವುದೇನೆಂದರೆ, ಅವರು ಇನ್ನೂ ಮುಂದಕ್ಕೆ ಹೋಗಬೇಕು. ಅಂದರೆ ಕೇಂದ್ರಕ್ಕೆ ಹೋಗಬೇಕು. ಅದನ್ನು ಬಿಟ್ಟರೆ ಬೇರೆ ಯಾವುದೂ ಇಲ್ಲಿ ಉಳಿದಿಲ್ಲ. ಮಾನ್ಯ ಪಟೇಲ್‌ರವರು ಮುಖ್ಯಮಂತ್ರಿಯಾಗಿರುವುದರಿಂದ, ನೀವು ಮುಖ್ಯಮಂತ್ರಿ ಆಗುವ ಪ್ರಶ್ನೆಯು ಇಲ್ಲ. ಇದು ಸ್ಪಷ್ಟ, ಅದರಲ್ಲಿ ಏನೂ ಅನುಮಾನ ಇಲ್ಲ. ತಾವು ಮಾನ್ಯ ಮುಖ್ಯಮಂತ್ರಿಯವರ ಆರೋಗ್ಯ ವಿಚಾರಣೆ ಮಾಡುವುದಕ್ಕೆ ಹೋಗತಕ್ಕಂಥದ್ದಕ್ಕೂ ಮತ್ತು ಈ ಸಂದರ್ಭಕ್ಕೂ ಒಂದಕ್ಕೊಂದು ಕಾಕತಾಳೀಯವಾಗಿದೆ ಅಷ್ಟೆ. ಅಂದರೆ, ಈಚಲ ಮರದ ಕೆಳಗೆ ಮಜ್ಜಿಗೆ ಕುಡಿದಂತಹ ಪರಿಸ್ಥಿತಿ ಆಗಿದೆ. ಇದರಿಂದ ತಮ್ಮ ಮನಸ್ಸಿಗೆ ನೋವು ಆಗಿದೆ, ಈ ನೋವಿಗೆ ನಾವುಗಳೆಲ್ಲರೂ ಕೂಡ ಭಾಗಿಯಾಗಿದ್ದೇವೆ. ಆದ್ದರಿಂದ ನಾವೆಲ್ಲರೂ ಕೂಡ ಆ ಪೀಠವನ್ನು ಬಹಳ ಎತ್ತರಕ್ಕೆ ತೆಗೆದುಕೊಂಡು ಹೋಗುವುದಕ್ಕೆ, ಸದನದ ಎರಡು ಕಡೆಯ ಸದಸ್ಯರು ಇದರಲ್ಲಿ ಭಾಗಿಯಾಗಿದ್ದೇವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಸಹೃದಯದಿಂದ, ಯಾವುದೇ ಪಿತೂರಿ, ಮರ್ಮ ಮತ್ತು ಯಾವುದು ರಾಜಕೀಯ ಕಾಣದೇ ಇರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು, ಇಂದೆಂದಿಗೂ ಇಂಥ ವಿಚಾರದಲ್ಲಿ ತಲೆ ಹಾಕತಕ್ಕಂಥವರಲ್ಲ. ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಮೇಲೆ ಏನೇನು ವಿಚಾರಗಳನ್ನು ಕೆಲವರು ಹೇಳಿದ್ದಾರೆ. ಆದರೆ ಈ ಜನ್ಮದಲ್ಲೂ ಅವರ ಕಿವಿಗಳು ಯಾರ ಮಾತನ್ನು ಕೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇನ್ನೊಬ್ಬರ ಮಾತುಗಳನ್ನು ಕೇಳಿಕೊಂಡು ಮಾಡುವವರು ಅಲ್ಲ, ನಾವು ಇದನ್ನು ಅನೇಕಸಾರಿ ನೋಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮುಖ್ಯಮಂತ್ರಿಗಳ ಪರವಾಗಿ ಎಷ್ಟು ಗ್ಯಾರಂಟಿಯಾಗಿ ಹೇಳುತ್ತಿದ್ದೀರಿ, ನಾಳೆ ದಿವಸ ವ್ಯತ್ಯಾಸ ಆದರೆ ಜನ ನಿಮ್ಮನ್ನು ಹಿಡಿದುಕೊಳ್ಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ನಾನು ಸತ್ಯವನ್ನು ಹೇಳುತ್ತಿದ್ದೇನೆ. ನಾನು ಮಾನ್ಯ ಪಟೇಲ್‌ರವರನ್ನು ನಿನ್ನೆ ಮೊನ್ನೆಯಿಂದ ನೋಡುತ್ತಿಲ್ಲ. ನಾವು 35 ವರ್ಷಗಳಿಂದ ಚಿಂತನೆ ಮಾಡಿಕೊಂಡು ಜೊತೆಯಲ್ಲಿ ಹಗಲಿರುಳು ಓಡಾಡಿದ್ದೇವೆ. ಅದರಲ್ಲಿ ಏನು ಅನುಮಾನವೇ ಇಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಯಾರ ಮಾತನ್ನು ಮುಖ್ಯಮಂತ್ರಿಗಳು ಕೇಳುವುದಿಲ್ಲ ಎಂದರೆ ಹೇಗೆ? ಕೆಲವು ಸಂದರ್ಭದಲ್ಲಿ ಯಾರ್ಯಾರೋ ಮಾತನ್ನು ಕೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಚಾಡಿ ಮಾತುಗಳನ್ನು ಮತ್ತು ಕೆಟ್ಟ ವಿಚಾರಗಳನ್ನು ಮತ್ತು ಇನ್ನೊಬ್ಬರ ಬಗ್ಗೆ ಪಿತೂರಿ ಮಾಡತಕ್ಕಂಥ ವಿಚಾರಗಳನ್ನು ಅಥವಾ

ಅಧಿಕಾರದಿಂದ ಅವರನ್ನು ಕಿತ್ತು ಹಾಕುವುದು, ಇವರನ್ನು ಕಿತ್ತು ಹಾಕುವುದು, ಈ ರೀತಿಯ ಮಾತುಗಳು ಅವರಲ್ಲಿಲ್ಲ. ಅತ್ಯಂತ ಜವಾಬ್ದಾರಿಯುತವಾದ ಮತ್ತು ಪ್ರಾಮಾಣಿಕತನ ಅವರಲ್ಲಿ ಇದೆ. ಈ ಒಳ್ಳೆಯತನವೇ ಅವರಿಗೆ ಇಲ್ಲಿಯವರೆಗೆ ಮುಂದುವರಿಸಿಕೊಂಡು ಹೋಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರಿಗೆ ಆಗಿರತಕ್ಕಂಥ ನೋವನ್ನು ಇವತ್ತು ಇಲ್ಲಿಯೇ ಬಿಟ್ಟುಬಿಡಿ. ಇನ್ನು ಮುಂದೆ ಸಭೆಗೆ ತಪ್ಪಿಸಿಕೊಂಡು ಹೋಗಬೇಡಿ. ಒಂದು ವಾರ ನೀವು ಹೊರಗಡೆ ಹೊದರೆ ಎಲ್ಲಿಗೋ ಹೋಗಿದ್ದಾರೆ ಎಂಬ ಅನುಮಾನ ಬರುತ್ತದೆ. ಮೊನ್ನೆ ನೀವು ದೆಹಲಿಗೆ ಹೋದಾಗ, ಯಾರ ಮನೆಗೋ ಹೋಗಿದ್ದಾರೆಂದು ಬರುತ್ತದೆ. ಇದು ಸತ್ಯ. ನಾವು ಈಗ ಪತ್ರಕರ್ತರಿಗೆ ಮತ್ತು ಇನ್ನೊಬ್ಬರಿಗೆ ಭಯಪಡಬೇಕಾಗಿಲ್ಲ, ಇದು ಒಂದು ರೀತಿ ಕವಲು ಒಡೆದ ಹಾಗೆ. ಆದುದರಿಂದ ನಾವೂ ನಾವೇ ಏಕೆ ತಲೆಕೆಡಿಸಿಕೊಳ್ಳಬೇಕು. ಆದುದರಿಂದ ತಾವು ದಯವಿಟ್ಟು ಶಾಸನಸಭೆ ನಡೆಯುವಾಗ ಎಲ್ಲಿಗೂ ಹೋಗಬೇಡಿ. ಒಂದುವೇಳೆ ತಾವು ಎಲ್ಲಿಗಾದರೂ ಹೋಗಬೇಕಾದರೆ ಇಂಥ ಕಡೆ ಹೋಗುತ್ತೇನೆಂದು ಸಭೆಯಲ್ಲಿ ಹೇಳಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ಉದಾಹರಣೆಗೆ, ಮಾನ್ಯ ನಂಜೇಗೌಡರು ಮತ್ತು ನನಗೂ ಸಹ ಅನುಮಾನ ಬಂತು. ಅಂದರೆ, ನೀವು ಎಲ್ಲಿಗೆ ಹೋಗಿದ್ದೀರಿ, ಏಕೆ ಹೋದರು ಎಂಬ ಅನುಮಾನ ನಮಗೆ ಬರುವಾಗ, ಇನ್ನು ಪತ್ರಕರ್ತರಿಗೆ ಅನುಮಾನ ಬರದೇ ಇರುತ್ತದೆಯೆ? ಆದ್ದರಿಂದ ಅನೇಕರಿಗೆ ಅನುಮಾನಗಳು ಬರದೇ ಇರತಕ್ಕಂಥ ರೀತಿಯಲ್ಲಿ ತಾವು ನಡೆದುಕೊಳ್ಳಬೇಕು. ಎಂದೆಂದಿಗೂ ಇದರ ಬಗ್ಗೆ ತಾವು ತಲೆಕೆಡಿಸಿಕೊಳ್ಳಬೇಡಿ, ಇದನ್ನು ಬಹಳ ಪ್ರೀತಿಯಿಂದ ಮತ್ತು ವಿಶ್ವಾಸದಿಂದ ಹೇಳುತ್ತಿದ್ದೇವೆ. ಯಾರು ಏನು ಹೇಳಿದರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಭದ್ರವಾಗಿರುತ್ತಾರೆ. ನಿಮ್ಮ ಬಗ್ಗೆಯಾಗಲಿ ಅಥವಾ ಯಾರ ಬಗ್ಗೆಯಾಗಲಿ, ಯಾವ ಗಳಿಗೆಯಲ್ಲಾಗಲಿ, ಯಾರ ಬಗ್ಗೆ ನಾನು ಏನು ತಿಳಿದುಕೊಂಡಿಲ್ಲ. ಈ ಸದನವನ್ನು, ಏನೇ ಆದರೂ ತಾವು ಗೌರವದಿಂದ ನಡೆಸುತ್ತಾ ಹೋಗುತ್ತಿದ್ದೀರಿ, ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಆದ್ದರಿಂದ ಇನ್ನು ಮುಂದೆ, ಚುನಾವಣೆಯ ಸಂದರ್ಭದಲ್ಲಿ, ಸ್ಪೀಕರ್ ಆಗಿದ್ದವರು ಚುನಾವಣೆಗೆ ನಿಲ್ಲಬಾರದು ಎನ್ನತಕ್ಕಂಥದ್ದರ ಬಗ್ಗೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಾನು ಹೊರಗಡೆ ಕುಳಿತುಕೊಂಡಿದ್ದಾಗ, ಮಾನ್ಯ ನಂಜೇಗೌಡರು, ಸ್ಪೀಕರ್‌ರವರು ನಿನ್ನೆ ದಳದ ಮೀಟಿಂಗ್‌ನಲ್ಲಿ ಭಾಗವಹಿಸಿದ್ದರೆಂದು ಪ್ರಸ್ತಾಪ ಮಾಡಿದ್ದಾರೆಂದು ಹೇಳಿದ್ದಕ್ಕೋಸ್ಕರ ನಾನು ಬಂದೆ. ದಳದ ಸಭೆಗೆ ಅವರು ಬಂದಿಲ್ಲ. ಅವರು ವಾಸ್ತವಿಕವಾಗಿ ನನ್ನನ್ನು ನೋಡುವುದಕ್ಕೆ ಬಂದಿದ್ದರು. ಇದು ಕರ್ಟಸಿ. ಸ್ಪೀಕರ್ ಇರಲಿ ಅಥವಾ ಪ್ರಧಾನಮಂತ್ರಿಗಳಿರಲಿ, ಒಬ್ಬೊಬ್ಬರ ವಿಶ್ವಾಸಕ್ಕೆ ಈ ಅಧಿಕಾರಗಳು ಅಡ್ಡಿ ಬರುವುದಿಲ್ಲ.

ಆ ಕಾರಣದಿಂದ, ನನ್ನ ವಿಶ್ವಾಸಕ್ಕೆ ಅವರು ಬಂದು ನೋಡಿದ್ದಾರೆ. ಇವರು ಬಂದಿದ್ದಾಗ ನಾನು ವಾರ್ಡ್‌ನಲ್ಲಿ ಇರಲಿಲ್ಲ. ಏಕೆಂದರೆ, ನಿನ್ನೆ ದಿವಸ 11-30 ಗಂಟೆಗೆ ನಮ್ಮ ಪಾರ್ಟಿ ಮುಖಂಡರ ಸಭೆಯನ್ನು ಕರೆದಿದ್ದೆವು, ಅದು ಪ್ರಾಕ್ಟಿಕಲಿ, ಪಾರ್ಲಿಮೆಂಟರಿ ಬೋರ್ಡ್ ಎಂದು ಎಲ್ಲರನ್ನೂ ಕರೆಯಲಾಗಿತ್ತು. ನಾವು ಅಲ್ಲಿ ಕುಳಿತಿರುವಾಗ ಸ್ಪೀಕರ್‌ರವರು ಅಲ್ಲಿಗೆ ಬಂದರು. ಇವರು ಎಲ್ಲಿದ್ದರೂ ಸ್ಪೀಕರ್, ಆದ್ದರಿಂದ ಒಳಗೆ ಬನ್ನಿ ಎಂದು ಕರೆದು, ಕೂರಿಸಿ ಕಾಫಿ ಕುಡಿದುಹೋಗಿ ಎಂದು ಹೇಳಿದೆವು. ಇದನ್ನು ಬಿಟ್ಟರೆ ಯಾವ ವಿಷಯವನ್ನು ಅವರು ಹೇಳಲಿಲ್ಲ, ನಾವೂ ಕೂಡ ಕೇಳಲಿಲ್ಲ. ಸ್ವಲ್ಪ ಹೊತ್ತು ಕುಳಿತುಕೊಂಡು ಅವರು ಹೋದರು. ಅದನ್ಯಾಕೆ ಇಷ್ಟೊಂದು, I can understand the propriety, the dignity of the office and we have a speaker, who is well aware of the dignity of this House. Nobody need teaching - he is sometimes overconscious. I have observed many speakers. I have seen in my parliamentary life quite enough. He is oversensitive to the dighity of this House ಇದನ್ನು ನೆಗ್ಲೆಕ್ಟ್ ಮಾಡಿ ಹಾಗೆ, ಹೀಗೆ ಎಂದು ಹೇಳುತ್ತಿಲ್ಲ. ಆದ್ದರಿಂದ ಅವರು ಮನಸ್ಸಿಗೆ ನೋವು ಮಾಡಿಕೊಳ್ಳುವ ಕಾರಣವೇ ಇಲ್ಲ. If you have committed anything, ಆಗ ನೋವು ಆಗುತ್ತದೆ. ಆದರೆ ನನ್ನನ್ನು ನೋಡುವುದಕ್ಕೆ ಬಂದಿದ್ದೇ ಇಂಪ್ರೊಪ್ರೈಟೀನಾ? ಆದ್ದರಿಂದ ಈ ವಿಷಯವನ್ನು ಇಲ್ಲಿಗೆ ಮುಗಿಸೋಣ, ಹೆಚ್ಚು ಪ್ರಸ್ತಾಪ ಮಾಡುವುದು ಬೇಡ.

2) ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ: ತಿಪಟೂರು ಉಪವಿಭಾಗದಲ್ಲಿ ಕೆ.ಎಸ್.ಎಫ್.ಸಿ ಬ್ರಾಂಚ್ ಮಾಡುವುದು.

265 (1724)

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ತಿಪಟೂರು ಉಪ ವಿಭಾಗದಲ್ಲಿ ಒಂದು ಕೆ.ಎಸ್.ಎಫ್.ಸಿ ಬ್ರಾಂಚ್ ಮಾಡುವ ಅಗತ್ಯತೆಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕೆ.ಎಸ್.ಎಫ್.ಸಿ ಶಾಖೆಯನ್ನು ಯಾವ ವರ್ಷದಿಂದ ಆರಂಭಿಸಲಾಗುವುದು?